ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

Swabhimani Sahakari

Pages:40, 12 ₹

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume -15
Issue - 10
October - 2018





ಬಿ.ಹೆಚ್. ಕೃಷ್ಣಾರೆಡ್ಡಿ

> ರಾಜ್ಯದಲ್ಲಿ 4385ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳು 60 ಲಕ್ಷ ಸದಸ್ಯರು, ರೂ. 700 ಕೋಟಿ ಶೇರು ಬಂಡವಾಳ, ರೂ. 17000 ಕೋಟಿ ಠೇವಣಿ, ರೂ. 1300 ಕೋಟಿ ನಿಧಿಗಳು, ರೂ. 13000 ಕೋಟಿ ಸಾಲಗಳು, ರೂ. 19000 ಕೋಟಿ ದುಡಿಯುವ ಬಂಡವಾಳ, 55 ಲಕ್ಷ ಜನರಿಗೆ ಉದ್ಯೋಗ, ರೂ. 250 ಕೋಟಿ ಲಾಭ, 1180ಕ್ಕೂ ಹೆಚ್ಚು ಇ- ಸ್ಟಾಂಪಿಂಗ್ ಕೇಂದ್ರಗಳ ನಿರ್ವಹಣೆ ಇವೆಲ್ಲವುಗಳನ್ನು ಗಮನಿಸಿದಾಗ ಈ ಕ್ಷೇತ್ರಕ್ಕೆ ರಾಜ್ಯ ಮಟ್ಟದ ಸೌಹಾರ್ದ ಸಹಕಾರಿ ಬ್ಯಾಂಕ್ ಸ್ಥಾಪನೆಯ ಅವಶ್ಯಕತೆ ಇದೆ.

# ಸೌಹಾರ್ದ ಸಹಕಾರಿಗಳಿಗೆ ಸಂತೋಷದ ಸಮಾಚಾರ

## ಸೌಹಾರ್ದ ಫೆಡರಲ್ ಸಹಕಾರಿ ಬ್ಯಾಂಕ್ ಸ್ಥಾಪನೆಗೆ ಆರ್.ಬಿ.ಐ. ಅಧಿಕಾರಿಗಳ ಸಲಹೆ ಗುಣಾತ್ಮಕ ಕಾರ್ಯನಿರ್ವಹಣೆ ಹಾಗೂ ಬೆಳವಣಿಗೆಯ ಶ್ಲಾಘನೆ.

**ಆತ್ಮೀಯ ಸಹಕಾರಿ ಬಂಧುಗಳೇ,**

ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ನಾಡ ಹಬ್ಬ ದಸರಾ, ವಿಜಯ ದಶಮಿಯ ಶುಭಾಶಯಗಳು. ತಾಯಿ ಭುವನೇಶ್ವರಿದೇವಿ ಎಲ್ಲರಿಗೂ ಸುಖ ಶಾಂತಿ ಸಮೃದ್ಧಿಯ ನೆಮ್ಮದಿಯ ಜೀವನವನ್ನು ಒದಗಿಸಲಿ. ವಿಶೇಷವಾಗಿ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಪ್ರಗತಿ ಸಾಧನೆಗೆ ಆ ಭಗವಂತ ನಮಗೆಲ್ಲ ಶಕ್ತಿ ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇನೆ.

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಗತಿ, ಸೌಹಾರ್ದ ಸಹಕಾರಿ ಕ್ಷೇತ್ರದ ಸಾಧನೆಗಳ ಬಗ್ಗೆ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ರಾಜ್ಯ ಮಟ್ಟದ ಸಹಕಾರಿ ಬ್ಯಾಂಕಿನ ಸ್ಥಾಪನೆಯ ಅವಶ್ಯಕತೆಯ ಬಗ್ಗೆ ದಿನಾಂಕ 26/9/2018 ರಂದು ಆರ್.ಬಿ.ಐ ಬೆಂಗಳೂರು ವಿಭಾಗೀಯ ಕಛೇರಿಯ ಪಟ್ಟಣ ಸಹಕಾರ ಬ್ಯಾಂಕುಗಳ ವಿಭಾಗದ ಮುಖ್ಯಸ್ಥ ಶ್ರೀ ತೊಟಗಮ್ ಜಮಾಂಗರವರನ್ನು ಭೇಟಿ ಮಾಡಿ ಚರ್ಚಿಸಲಾಗಿದೆ.

ರಾಜ್ಯದಲ್ಲಿ 4385ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳು 60 ಲಕ್ಷ ಸದಸ್ಯರು, ರೂ. 700 ಕೋಟಿ ಶೇರು ಬಂಡವಾಳ, ರೂ. 17000 ಕೋಟಿ ಠೇವಣಿ, ರೂ. 1300 ಕೋಟಿ ನಿಧಿಗಳು, ರೂ. 13000 ಕೋಟಿ ಸಾಲಗಳು, ರೂ. 19000 ಕೋಟಿ ದುಡಿಯುವ ಬಂಡವಾಳ, 55 ಲಕ್ಷ ಜನರಿಗೆ ಉದ್ಯೋಗ, ರೂ. 250 ಕೋಟಿ ಲಾಭ, 1180ಕ್ಕೂ ಹೆಚ್ಚು ಇ- ಸ್ಟಾಂಪಿಂಗ್ ಕೇಂದ್ರಗಳ ನಿರ್ವಹಣೆ ಇವೆಲ್ಲವುಗಳನ್ನು ಗಮನಿಸಿದಾಗ ಈ ಕ್ಷೇತ್ರಕ್ಕೆ ರಾಜ್ಯ ಮಟ್ಟದ ಸೌಹಾರ್ದ ಸಹಕಾರಿ ಬ್ಯಾಂಕ್ ಸ್ಥಾಪನೆಯ ಅವಶ್ಯಕತೆ ಇದೆ. ರಾಜ್ಯದಲ್ಲಿ ಎರಡು ಅಪೆಕ್ಸ್ ಬ್ಯಾಂಕ್ ಸ್ಥಾಪನೆಗೆ ಅವಕಾಶವಿರುವುದಿಲ್ಲ. ಹೊಸ ಪಟ್ಟಣ ಸಹಕಾರ ಬ್ಯಾಂಕ್ ಸ್ಥಾಪನೆಗೆ ಆರ್.ಬಿ.ಐ ಅನುಮತಿ ನೀಡುವುದಿಲ್ಲ. ಹೀಗಾಗಿ ಸಂಯುಕ್ತ ಸಹಕಾರಿಯು, ತುಮಕೂರಿನ ಪಟ್ಟಣ ಸಹಕಾರಿ ಬ್ಯಾಂಕ್ಕಿನ ನಿರ್ವಹಣೆಯನ್ನು ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಪರಿವರ್ತಿಸಿ ಕಾರ್ಯವ್ಯಾಪ್ತಿಯನ್ನು ರಾಜ್ಯ ವ್ಯಾಪ್ತಿಗೆ ಹೆಚ್ಚಿಸಿ ಸೌಹಾರ್ದ ಸಹಕಾರಿ ಬ್ಯಾಂಕ್ ಆಗಿ ಕಾರ್ಯನಿರ್ವಹಿಸುವ ಯೋಜನೆಯನ್ನು ಆರ್.ಬಿ.ಐ ಅಧಿಕಾರಿಗಳ ಗಮನ ಸೆಳೆದಾಗ ಆರ್.ಬಿ.ಐ ಪ್ರಧಾನ ವ್ಯವಸ್ಥಾಪಕ ಶ್ರೀ ತೊಟಗಮ್ ಜಮಾಂಗರವರು ಈ ಬಗ್ಗೆ ಪ್ರತಿಕ್ರಿಯೆ ನೀಡಿ ಹೊಸ ಪಟ್ಟಣ ಸಹಕಾರ ಬ್ಯಾಂಕುಗಳ ಪ್ರಾರಂಭಿಸುವುದಕ್ಕೆ ಆರ್.ಬಿ.ಐ ಅನುಮತಿ ನೀಡುವುದನ್ನು ನಿಲ್ಲಿಸಿರುವುದಿಲ್ಲ. ಸದ್ಯಕ್ಕೆ ಸಂಯುಕ್ತ ಸಹಕಾರಿಯು ನೀಡಲಿರುವ ಪ್ರಸ್ತಾವೆಯ ಬದಲಿಗೆ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಫೆಡರಲ್ ಬ್ಯಾಂಕ್ ಸ್ಥಾಪನೆಯನ್ನು ಮಾಡಿ ಇದಕ್ಕೆ ಆರ್.ಬಿ.ಐ ಅನುಮತಿ ನೀಡುತ್ತದೆ ಎಂದು ತಿಳಿಸಿದರು. ಈ ಬಗ್ಗೆ ಕೂಡಲೆ ಪ್ರಸ್ತಾವನೆಯನ್ನು ಸಲ್ಲಿಸಿ ಎಂದು ತಿಳಿಸಿದರು. ಚರ್ಚೆಯಲ್ಲಿ ಭಾಗವಹಿಸಿದ ನಮಗೆ ಇದು ನಿಜವಾಗಿಯೂ ಅತ್ಯಂತ ಸಂತೋಷದ ಸಮಾಚಾರವಾಗಿ ಆರ್.ಬಿ.ಐ. ಪ್ರಧಾನ ವ್ಯವಸ್ಥಾಪಕ ಶ್ರೀ ತೊಟಗಮ್ ಜಮಾಂಗರವರಿಗೆ ಧನ್ಯವಾದ ತಿಳಿಸಲಾಗಿದೆ.

ಸೌಹಾರ್ದ ಸಹಕಾರಿಗಳ ಬಹುದಿನದ ಬೇಡಿಕೆಯಾದ ಸಂಯುಕ್ತ ಸಹಕಾರಿಯ ಮಹತ್ವಾಕಾಂಕ್ಷೆಯಾದ ರಾಜ್ಯದ ಸೌಹಾರ್ದ ಸಹಕಾರಿಗಳಿಗಾಗಿ ಪ್ರತ್ಯೇಕ ಸಹಕಾರಿ ಬ್ಯಾಂಕ್ ಸ್ಥಾಪಿಸುವ ದಿನಗಳು ಹತ್ತಿರವಾಗಿವೆ. ಆರ್.ಬಿ.ಐ. ನ ಅಧಿಕಾರಿಗಳು ಸಕಾರಾತ್ಮವಾಗಿ ಸ್ಪಂದಿಸಿರುವುದು ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಗುಣಾತ್ಮಕ ಸಾಧನೆಗೆ ದೊರೆತಿರುವ ಮನ್ನಣೆ ಎಂದು ಭಾವಿಸಬಹುದಾಗಿದೆ. ಇದೇ ರೀತಿಯ ಗುಣಾತ್ಮಕ ಕಾರ್ಯನಿರ್ವಹಣೆ ಹಾಗೂ ಬೆಳವಣಿಗೆಯನ್ನು ಮುಂದುವರೆಸುವುದು ನಮ್ಮೆಲ್ಲರ ಜವಾಬ್ದಾರಿ ಎಂದು ನಾನು ಭಾವಿಸಿದ್ದೇನೆ.

ಸ್ವಾಭಿಮಾನಿ ಸಹಕಾರಿ
ಸಂಪಾದಕ ಮಂಡಳಿ

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ. ಪಾಟೀಲ್
ಸಂಪಾದಕರು

ಶ್ರೀ ವಿ.ಜೆ.ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ನಿರ್ಮಾಣ ಭವನ", ಡಾ.ರಾಜಕುಮಾರ್ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ,
ಬೆಂಗಳೂರು–560010.
ದೂರವಾಣಿ/ ಫ್ಯಾಕ್ಸ್ :
080-23378375-80, 23474408, 23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

ಒಳಪುಟಗಳಲ್ಲಿ . . .

ಸಂಯುಕ್ತ ಸಹಕಾರಿಗಳ ಸಮಾಚಾರಗಳು ........ ........................................................... 5–14
ಸೌಹಾರ್ದ ಸಹಕಾರಿಗಳ ಸಮಾಚಾರಗಳು ........ ........................................................ 15–35
ಲೇಖನ ........................................ 35–36
ನಿಮ್ಮ ಪ್ರಶ್ನೆ – ನಮ್ಮ ಉತ್ತರ .................. 36
ಆರ್‌ಬಿಐ ನ್ಯೂಸ್ .......................... 37–40

# ಸಂಪಾದಕೀಯ

## ರಾಷ್ಟ್ರೀಯ ಸಹಕಾರ ಯೂನಿಯನ್ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅಧ್ಯಕ್ಷರ ಭಾಷಣ

### ದೇಶದ ಸಹಕಾರಿ ಕ್ಷೇತ್ರದ ಹಿತ ರಕ್ಷಣೆ ಕ್ರಮಕ್ಕೆ ಒತ್ತು : ಸ್ವಾಗತಾರ್ಹ ಸಹಕಾರಿ ಮುಖಂಡರಿಗೆ ಜವಾಬ್ದಾರಿಯ ಮನವರಿಕೆ ಮಾತು

ದಿನಾಂಕ 19.9.2018 ರಂದು ರಾಷ್ಟ್ರೀಯ ಸಹಕಾರ ಯೂನಿಯನ್ನಿನ ವಾರ್ಷಿಕ ಸಾಮಾನ್ಯ ಸಭೆ. ಈ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಭಾಗವಹಿಸಿ ಈ ಸಭೆ ಕೇವಲ ಔಪಚಾರಿಕ ವಾರ್ಷಿಕ ಸಾಮಾನ್ಯ ಸಭೆಯಾಗಬಾರದು ಈ ದೇಶದ ಪ್ರತಿ ಗ್ರಾಮಕ್ಕೂ ತನ್ನ ವ್ಯಾಪ್ತಿಯನ್ನು ವಿಸ್ತರಿಸಿರುವ 97% ಪ್ರತಿಶತ ಗ್ರಾಮೀಣ ಜನರನ್ನು ಸದಸ್ಯರನ್ನಾಗಿ ಹೊಂದಿದ 6 ಲಕ್ಷಕ್ಕೂ ಹೆಚ್ಚು ಸಹಕಾರಿ ಸಂಸ್ಥೆಗಳು, 30 ಕೋಟಿಗೂ ಹೆಚ್ಚು ಸದಸ್ಯರು ಈ ಬೃಹತ ಸಹಕಾರಿ ಕ್ಷೇತ್ರದ ಮೂಲಕ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯನ್ನು ಹೊಂದಲು ಸಂಘಟಿತರಾಗಿರುವಾಗ ರಾಷ್ಟ್ರಮಟ್ಟದಲ್ಲಿ ಈ ಕ್ಷೇತ್ರದ ಅಗ್ರಗಣ್ಯ ಸಂಸ್ಥೆಯಾಗಿರುವ ರಾಷ್ಟ್ರೀಯ ಸಹಕಾರ ಯೂನಿಯನ್‌ಗೆ ಹೆಚ್ಚಿನ ಪ್ರಾಧಾನ್ಯತೆ ಇದೆ. ಹೆಚ್ಚಿನ ಜವಾಬ್ದಾರಿ ಇದೆ. ದೇಶದ ಅತ್ಯುನ್ನತ ಸಹಕಾರಿ ಮಾತ್ರ ಸಂಸ್ಥೆ ಇದಾಗಿದೆ. ದೇಶದ ಸಹಕಾರಿ ಕ್ಷೇತ್ರದ ಮುಖವಾಣಿಯಂತೆ ಇದು ಕಾರ್ಯನಿರ್ವಹಿಸುತ್ತಿದೆ.

ಈ ಸಂಸ್ಥೆಯ ಮೂಲಕ ಈ ದೇಶದ ಸಹಕಾರಿ ಚಳುವಳಿ ಸುಸ್ಥಿರ ಅಭಿವೃದ್ಧಿಯತ್ತ ಸಾಗಬೇಕಿದೆ. ಎಂದು ತಿಳಿಸುತ್ತ ದೇಶದ ಸಹಕಾರಿ ಕ್ಷೇತ್ರದ ಹಲವಾರು ಜ್ವಲಂತ ಸಮಸ್ಯೆಗಳಿವೆ. ಸಮಸ್ಯೆಗಳ ಪರಿಹಾರಕ್ಕೆ ಇದೊಂದು ಪರಿಣಾಮಕಾರಿಯಾದ ವೇದಿಕೆಯಾಗಬೇಕು. ಸರಕಾರದಲ್ಲಿ ಸಹಕಾರ ಕ್ಷೇತ್ರದ ಸಾಧನೆಗಳನ್ನು ಬಿಂಬಿಸುವ ಜೊತೆಗೆ ನಮ್ಮ ಸಮಸ್ಯೆಗಳ ಪರಿಹಾರಕ್ಕೆ ಕ್ರಮವಿಡುವುದು ಅಗತ್ಯ. ವಿಶೇಷವಾಗಿ ಆದಾಯ ತೆರಿಗೆ ಸಮಸ್ಯೆ ಸಹಕಾರ ಸಂಸ್ಥೆಗಳಿಗೆ ತೊಂದರೆ ಅನುಭವಿಸುತ್ತಿವೆ.

ಈ ಬಗ್ಗೆ ಮಾನ್ಯ ಹಣಕಾಸು ಸಚಿವರಿಗೆ, ಸಿ.ಬಿ.ಡಿ.ಟಿ ಅಧಿಕಾರಿಗಳಿಗೆ ಹಲವು ಬಾರಿ ಭೇಟಿಯಾಗುವುದರ ಜೊತೆಗೆ ಮನವಿ ಪತ್ರಗಳನ್ನು ಸಲ್ಲಿಸಲಾಗುತ್ತಿದೆ. ಇದುವರೆಗೆ ಯಾವುದೇ ಸಕಾರಾತ್ಮ ವಿಷಯಗಳು ಹೊರಹೊಮ್ಮದಿರುವುದು ಸಹಕಾರಿಗಳಿಗೆ ಆತಂಕವನ್ನುಂಟುಮಾಡಿದೆ. ಈ ಬಗ್ಗೆ ರಾಷ್ಟ್ರೀಯ ಸಹಕಾರಿ ಯೂನಿಯನ್ನಿನ ಈ ವೇದಿಕೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕೆಂದು ಆಗ್ರಹಿಸಿದರು. ಅಧ್ಯಕ್ಷರು ವ್ಯಕ್ತ ಪಡಿಸಿದ ಕಳಕಳಿಯ ಬಗ್ಗೆ ದೇಶದ ಇತರ ಭಾಗಗಳಿಂದ ಸಭೆಯಲ್ಲಿ ಭಾಗವಹಿಸಿದ ಸದಸ್ಯ ಸಹಕಾರಿಗಳು ಒಕ್ಕೂರಲಿನಿಂದ ಚಪ್ಪಾಳೆ ತಟ್ಟಿ ಬೆಂಬಲಿಸಿರುವುದು ಸ್ವಾಗತಾರ್ಹ ವಿಷಯ.

ರಾಷ್ಟ್ರೀಯ ಸಹಕಾರಿ ಈ ಯೂನಿಯನ್ನು ದೇಶದ ಸಹಕಾರಿ ಕ್ಷೇತ್ರದ ಮಾತೃ ಸಂಸ್ಥೆಯಾಗಿ ತನ್ನ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ಹೆಚ್ಚಿನ ಕ್ರಮವಿಡುತ್ತದೆ ಎಂದು ಅಪೇಕ್ಷಿಸಲಾಗಿದೆ.



# ಜ್ಞಾನ ಜ್ಯೋತಿ

ಶ್ರೀ ಎಂ.ಬಸಪ್ಪ, ಸಹಕಾರ ಸಂಘಗಳ ಉಪನಿಬಂಧಕರು (ನಿವೃತ್ತ), ಬೆಂಗಳೂರು.

## ಏಕಾಗ್ರತೆಯಿಂದ ಸಾಧನೆ

ವಿಶ್ವದ ಆಧ್ಯಾತ್ಮಿಕ ಭೂಪಟದಲ್ಲಿ ಭಾರತಕ್ಕೆ ಗುರುಸ್ಥಾನಮಾನವಿದೆಯೆಂಬ ಅಂಶವನ್ನು ಉಳಿದ ಎಲ್ಲಾ ರಾಷ್ಟ್ರಗಳೂ ಅಂಗೀಕರಿಸುತ್ತವೆಯೆಂದರೆ, ಈ ಫಲಪ್ರದ ಸಾಧನೆ ನಮ್ಮ ಋಷಿಮುನಿಗಳ, ಸಂತರ, ಚಿಂತನಶೀಲರ ಪರತತ್ವವನ್ನರಿವ ಅವಿರತ ಪ್ರಯತ್ನವೆಂಬುದರ ಬಗ್ಗೆ ಎರಡು ಮಾತಿಲ್ಲವೆಂದ ಕವಿ ಡಿ.ವಿ.ಜಿಯವರು ಮುಂದುವರೆದು ಏಕಾಗ್ರತೆಯೆಂಬುದು ಯೋಗಿಗಳಿಗೆ ಮಾತ್ರ ಲಭ್ಯವಾಗಿರುವ ಸೊತ್ತೆಂಬುದನ್ನು ಅಲ್ಲಗಳೆಯುತ್ತಾರೆ.

ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಪ್ರತಿಯೊಬ್ಬರಿಗೂ ಏಕಾಗ್ರತೆ ಅವಶ್ಯಕವೆನ್ನುತ್ತಾ, ಕಮ್ಮಾರರಲ್ಲಿ, ಬಡಗಿಗಳಲ್ಲಿ, ಕ್ಷೌರಿಕರಲ್ಲಿ, ಬೇಸಾಯಗಾರರಲ್ಲಿ, ದೊಂಬರಾಟದವರಲ್ಲಿ, ಅಕ್ಕಸಾಲಿಗರಲ್ಲಿ ಹಾಗೂ ನೇಯ್ಗೆಯವರಲ್ಲಿ ಅಡಕವಾಗಿರುವ ಏಕಾಗ್ರತೆಯನ್ನು ಉದಾಹರಿಸುತ್ತಾ, ಕಮ್ಮಾರನ ಸುತ್ತಿಗೆ ಗುರಿತಪ್ಪಿದರೆ ಕೈ ಮುರಿದುಕೊಳ್ಳುವ ಸಂಭವ, ಕ್ಷೌರಿಕನ ಕತ್ತಿ ಸ್ವಲ್ಪ ಜಾರಿದರೂ ಚರ್ಮ ಕತ್ತರಿಸಿ ರಕ್ತ ಸುರಿಯುವ ಸಂಭವ, ಬಡಗಿಗೆ ತನ್ನ ಉಳಿಯ ಮೇಲೆ ಹಿಡಿತವಿಲ್ಲದಿದ್ದರೆ ತನ್ನ ಬೆರಳಿಗೆ ಉಳಿಗಾಲವಿಲ್ಲ. ಇದೇ ರೀತಿ ನೇಯ್ಗೆಯವರ ಕುಶಲತೆಯಿದ್ದರೆ ಮಾತ್ರ ಉತ್ತಮ ವಸ್ತ್ರದ ಆಗಮನ. ಇವರೆಲ್ಲಾ ತಮ್ಮ ಉದ್ಯೋಗದ ಅವಧಿಯಲ್ಲಿ ಅಪಾಯದ ಅಂಚಿನಲ್ಲಿರುವವರೇ. ಏಕಾಗ್ರತೆಯಿಂದ ಕೂಡಿದ ಸಾಧನೆಯಿಂದ ಉತ್ತಮ ಉತ್ಪನ್ನ ಹೊರಬರುತ್ತದೆ. ಅವರುಗಳಿಗೆ ಕರ್ತವ್ಯದ ಕಡೆಯೇ ಮನಸ್ಸು ವಾಲಿರುತ್ತದೆ. ಆದರೆ ಅವರುಗಳಿಗೆ ನಿರ್ಜೋದ್ದೇಶದ ಕೆಲಸವನ್ನು ಬಿಟ್ಟರೆ ಅನ್ಯತಾ ಒಣಹರಟೆಗೆ ಬಿಡುವೇ ಇರದು. ತತ್ಕಾರಣ ಊಟದ ಬಗ್ಗೆಯೂ ಹೆಚ್ಚು ತಲೆ ಕೆಡಿಸಿಕೊಂಡವರಲ್ಲ. ಹೀಗಾಗಿ ಅವರಿಗೆ ಜೀವನ ಕಷ್ಟಕರವೆನಿಸಿಯೇ ಇಲ್ಲವೆನ್ನುತ್ತಾ, ಶ್ರಮಜೀವಿಗಳ ಚಿತ್ರಣವನ್ನು ಈ ಕೆಳಗಿನ ಪದ್ಯದಲ್ಲಿ ನೀಡಿದ್ದಾರೆ. ಪದ್ಯವಿನ್ಯಾಸವನ್ನು ಸವಿಯಿರಿ:

"ಬಡಗಿ ಬೇಸಾಯಿ ಕರ್ಮಿಗರೇನು ಯೋಗಿಗಳೋ।  
ಮುಡಿಪವರ ಮನಸೆಲ್ಲ ಕೈಯ ದುಡಿತಕ್ಕೆ॥  
ಬಿಡುವಿರದು ಬಣಗು ಚಿಂತೆಗೆ, ಬುತ್ತಿ ಹಂಗಿರದು ।  
ಕಡಿದಲ್ಲವರ್ಗೆ ಬಾಳ್" ॥ಮಂಕುತಿಮ್ಮ॥

ಏಕಾಗ್ರತೆಗೆ ವಿರುದ್ಧವಾದುದು ಚಂಚಲತೆ. ಈ ಚಂಚಲತೆಯ ವಿಚಾರ ಇಂದು ನಿನ್ನೆಯದಲ್ಲ, ಹಿಂದಿನಿಂದಲೂ ಇದ್ದದ್ದೇ. ಆದರೆ ಈಗಿನ ಅನೀತಿ, ಅಶಿಸ್ತಿನ ಜೀವನದ ಪರಿಣಾಮವಾಗಿ ಚಂಚಲತೆ ಹೆಚ್ಚಾಗಿರಬಹುದು. ಪುರಾಣಜನಿತ ಉದಾಹರಣೆಯಿಂದ ಹೊರಬರುವ ಅಂಶವೆಂದರೆ, ಅಂಥಹ ಧರ್ಮಿಷ್ಟನಾದ ಅರ್ಜುನನ ಮನಸ್ಸೇ ಚಂಚಲವಾಗಿತ್ತೆಂದರೆ, ಇಂದಿನ ಷೋಕಿಲಾಲರ ಮನಸ್ಸು ಸ್ಥಿರವಾಗಿರುವುದುಂಟೆ ಎನ್ನುವ ಪ್ರಶ್ನೆ ಉದ್ಭವಿಸುತ್ತದೆ.

ಅರ್ಜುನನು ತನ್ನ ಸರ್ವೋತ್ಕೃಷ್ಟ ಮಾರ್ಗದರ್ಶಕ ಹಾಗೂ ಗುರು ಶ್ರೀಕೃಷ್ಣನಿಗೆ "ಕೃಷ್ಣ ಈ ಮನಸ್ಸು ಮರ್ಕಟದಂತೆ ಚಂಚಲ, ಮದಭರಿತ ಸಲಗನಂತೆ ಬಲಿಷ್ಠ, ಇದನ್ನು ನಿಯಂತ್ರಿಸುವುದೆಂದರೆ ಗಾಳಿಯನ್ನು ಕಟ್ಟಿಡುವಷ್ಟರ ಮಟ್ಟದ ಕಷ್ಟಸಾಧ್ಯಕೆಲಸ"ವೆಂದಾಗ ಕೃಷ್ಣನು,

"ಅಸಂಶಯಂ ಮಹಾಬಾಹೋ ಮನೋ ದುರ್ನಿಗ್ರಹಂಚಲಂ  
ಅಭ್ಯಾಸೇನತು ಕೌಂತೇಯ ವೈರಾಗ್ಯೇಣಾ ಚ ಗೃಹ್ಯತೇ"–(6:35 ಭಗವದ್ಗೀತೆ)

ಇಂತಹ "ಚಂಚಲ ಮನಸ್ಸನ್ನು ಕೂಡಾ ಸತತ ಅಭ್ಯಾಸಬಲದಿಂದ ಹಾಗೂ ವೈರಾಗ್ಯದಿಂದ ನಿಗ್ರಹಿಸಿ ಹತೋಟಿಗೆ ತರಬಹುದೆಂಬುದು ಸತ್ಯವೆಂದೂ ಇದಕ್ಕೆ ಸಂಶಯವೇ ಬೇಡ"ವೆಂದೂ ಉತ್ತರಿಸುತ್ತಾನೆ.

ಪ್ರಸಕ್ತ ಕಾಲದ ಮನಶಾಸ್ತ್ರಜ್ಞನೋರ್ವನು ಮನುಷ್ಯನ ಪ್ರಗತಿಯ ಬಗ್ಗೆ ಚರ್ಚಿಸುತ್ತಾ, "ಒಚಿಟಿ ೨ ಣುಚಿಣ ತ್ರಿಚಿಣ ೨ಜ ಣುಟಿಇ ಚಿಟಟ ಜಚಿಥಿ ಟಠಟಿರ" "ನೀನು ನಿನ್ನ ಮನಸ್ಸಿನಲ್ಲಿ ಏನನ್ನು ಸದಾ ಚಿಂತನೆ ನಡೆಸುತ್ತಿಯೋ ಅದೇ ಆಗುತ್ತೀಯ" ಎಂದು ವ್ಯಾಖ್ಯಾನಿಸಿ, ಮನಸ್ಸನ್ನು ಸತತವಾಗಿ ಧನಾತ್ಮಕ ಚಿಂತನೆಗಳತ್ತ ಹರಿಸಿರೆಂದು ಸಲಹೆ ನೀಡುತ್ತಾರೆ.

ಆದ್ದರಿಂದ, ಸದ್ವಿಷಯವನ್ನೇ ಚಿಂತಿಸುತ್ತಾ, ಸರ್ವರ ಒಳಿತನ್ನೇ ಹಾರೈಸುತ್ತಾ, ಸರ್ವರ ಕ್ಷೇಮಾಭಿವೃದ್ಧಿಯ ಕ್ಷೇತ್ರವಾದ ಸಹಕಾರದಲ್ಲಿ ಉತ್ತಮವಾಗಿ ಪಾಲ್ಗೊಂಡು, ಮುಂದಿನ ಪೀಳಿಗೆಗೆ ಸುಖಜೀವನದ ಮಾರ್ಗವನ್ನು ನೀಡುತ್ತಾ ಸದೃಢ ಹಾಗೂ ಸೃಜನಾತ್ಮಕ ಸಮಾಜ ನಿರ್ಮಾಣಕ್ಕೆ ಸಹಕರಿಸಬೇಕೆಂಬುದೇ ಈ ಪದ್ಯದ ಸಾರಾಂಶವಾಗಿದೆ.

## ಆದಾಯ ತೆರಿಗೆ ಕುರಿತಂತೆ ಸೌಹಾರ್ದ ಸಹಕಾರಿಗಳ ಆದ್ಯ ಗಮನಕ್ಕಾಗಿ

ಸೌಹಾರ್ದ ಸಹಕಾರಿಗಳು ಸಹಕಾರ ಸಂಘಗಳೇ ಎಂದು ಆದಾಯ ತೆರಿಗೆ ಅಧಿಕಾರಿಗಳು ಸಂದೇಹ ವ್ಯಕ್ತಪಡಿಸಿ ಸಹಕಾರಿಗಳಿಗೆ ಆದಾಯ ತೆರಿಗೆಯನ್ನು ವಿಧಿಸಿ ಆದೇಶ ಹೊರಡಿಸುತ್ತಿರುವ ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾರಿಯು ಕರ್ನಾಟಕ ಮತ್ತು ಗೋವಾದ ಪ್ರಧಾನ ಮುಖ್ಯ ಆಯುಕ್ತರನ್ನು ಇದೇ ದಿನಾಂಕ 9.10.2018ರಂದು ಭೇಟಿ ಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಅಲ್ಲದೆ ಕಾನೂನು ತಜ್ಞರ ಅಭಿಪ್ರಾಯ ಪಡೆದು ಸಂಯುಕ್ತ ಸಹಕಾರಿಯ ಉಚ್ಚ ನ್ಯಾಯಾಲಯದ ಮೊರೆ ಹೋಗಲು ಕ್ರಮವಿಡಲಾಗುತ್ತಿದೆ. ಆದ್ದರಿಂದ ಯಾವುದೇ ಸೌಹಾರ್ದ ಸಹಕಾರಿಗಳು ಆತಂಕಕ್ಕೆ ಒಳಗಾಗಬಾರದು ಎಂದು ಈ ಮೂಲಕ ತಿಳಿಸಿದೆ.

ವ್ಯವಸ್ಥಾಪಕ ನಿರ್ದೇಶಕರು,

# "ಸಹಕಾರ ಹಾಗೂ ಬ್ಯಾಂಕಿಂಗ್ ಮೆನೇಜಮೆಂಟ್ ಡಿಪ್ಲೋಮಾ"

## ಸಮಗ್ರ ಸಹಕಾರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗೆ, ಸಾಮಾನ್ಯ ಸಹಕಾರಿಗಳಿಗೆ ಹಾಗೂ ದೇಶದ ಯುವಕ ಯುವತಿಯರಿಗೆ ಅನ್ವಯಿಸುವ,

## 6 ತಿಂಗಳ ದೂರ ಶಿಕ್ಷಣ ಕೋರ್ಸ್" 1ನೇ ಜನವರಿ 2019 ರಿಂದ ಪ್ರಾರಂಭ

**"Diploma in Cooperation and Banking Management"**

**6 Months Distance Education Course starts from 1st January 2019**

**(For the employees working under all types of Cooperative Societies of 1959 Act and Cooperatives working under Souharda Cooperative Act of 1997, for General co-operators and youths of the Nation.)**

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ದಿನಾಂಕ : 06.09.2018 ರಂದು ನಡೆದ ಆಡಳಿತ ಮಂಡಳಿ ಹಾಗೂ ದಿನಾಂಕ : 07.09.2018 ರಂದು ನಡೆದ 17 ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ನಿರ್ಣಯಿಸಿದಂತೆ ಸಂಯುಕ್ತ ಸಹಕಾರಿಯ ವತಿಯಿಂದ ರಾಷ್ಟ್ರೀಯ ಸಹಕಾರ ಶಿಕ್ಷಣ ಸಮಿತಿ ನವದೆಹಲಿ National council for cooperative Education (NCCT) New Delhi ಇವರು ನೀಡಲಿರುವ ಮಾನ್ಯತೆ/ಅನುಮೋದನೆಯೊಂದಿಗೆ 6 ತಿಂಗಳ ದೂರ ಶಿಕ್ಷಣದಲ್ಲಿ **"ಡಿಪ್ಲೋಮಾ ಇನ್ ಕೋ–ಆಪರೇಶನ್ & ಬ್ಯಾಂಕಿಂಗ ಮೆನೇಜಮೆಂಟ"**ನ್ನು ಇದೇ ಜನವರಿ 2019 ರಿಂದ ಪ್ರಾರಂಭಿಸಲು ಉದ್ದೇಶಿಸಿದೆ. (ಎನ್.ಸಿ.ಸಿ.ಟಿ ಇವರಿಗೆ ಮಾನ್ಯತೆ / ಅನುಮೋದನೆಗಾಗಿ ಪತ್ರ ನೀಡಲಾಗಿದೆ. ಭೇಟಿ ಮಾಡಿ ಚರ್ಚಿಸಲಾಗಿದೆ. ಮಾನ್ಯತೆ/ಅನುಮೋದನೆ ನೀಡಲು ಒಪ್ಪಿದ್ದಾರೆ)

ಈ ತರಬೇತಿ ಪೂರ್ಣಗೊಳಿಸುವುದರಿಂದ ಸಹಕಾರಿ ಸಂಸ್ಥೆಗಳಲ್ಲಿ ಉದ್ಯೋಗ ಪಡೆಯಲು ಸಹಕಾರಿಯಾಗುತ್ತದೆ. ಹಾಗೂ ಹಾಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರಿ ಸಂಸ್ಥೆಗಳ ಸಿಬ್ಬಂದಿಯವರಿಗೆ ಸೇವೆ ಖಾಯಂಯಾಗಲು ಹಾಗೂ ಸೇವೆಯಲ್ಲಿ ಬಡ್ತಿ ಪಡೆಯಲು ಪ್ರಯೋಜನವಾಗಲಿದೆ.

ಕನಿಷ್ಠ ವಿದ್ಯಾರ್ಹತೆ ಪದವಿ ಪೂರ್ವ ಶಿಕ್ಷಣ (ಪಿ.ಯು.ಸಿ) ಪೂರ್ಣಗೊಂಡಿರಬೇಕು.

ಈ ಕೋರ್ಸ್ 6 ತಿಂಗಳು ಅವಧಿಯದ್ದಾಗಿದೆ. 6 ವಿಷಯಗಳಿರುತ್ತವೆ. ಪ್ರತಿ 3 ತಿಂಗಳಿಗೆ ಒಂದು ಬಾರಿ 5 ದಿನಗಳ ಕಂಟ್ಯಾಕ್ಟ ಕ್ಲಾಸ ನಡೆಸಿ 3 ವಿಷಯಗಳಿಗೆ ಪರೀಕ್ಷೆ ನಡೆಸಲಾಗುವುದು. 6 ತಿಂಗಳ ನಂತರ ಎರಡು ಪರೀಕ್ಷೆ ಅಂಕಗಳನ್ನು ಕೂಡಿಸಿ ರಿಸಲ್ಟ ಸಿದ್ಧಪಡಿಸಿ ಪ್ರಕಟಿಸಲಾಗುವುದು. ನಂತರ ಅಂಕಪಟ್ಟಿಯನ್ನು ಸರ್ಟಿಫಿಕೇಟ್‌ನ್ನು ನೀಡಲಾಗುವುದು.

ಈ ಕೋರ್ಸ್‌ನ್ನು 1959ರ ಸಹಕಾರ ಸಂಘಗಳ ಕಾಯ್ದೆಯಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಯವರು, 1997ರ ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಯವರು, ಸಾಮಾನ್ಯ ಸಹಕಾರಿಗಳು ಹಾಗೂ ಯುವಕ ಯುವತಿಯರು ಮಾಡಬಹುದಾಗಿದೆ.

**ಕೋರ್ಸ್ ಫೀ :** ರೂ 4000/–(ಪ್ರವೇಶ ಹಾಗು ವ್ಯವಸ್ಥಾಪನಾ ಶುಲ್ಕ ರೂ 1000/– ಕೋರ್ಸ್ ಮೆಟಿರಿಯಲ್ ರೂ 2000/– ಪರೀಕ್ಷಾ ಫೀ 1000/–)

5 ದಿನಗಳ 2 ಕಂಟ್ಯಾಕ್ಟ ತರಗತಿಗಳ ಊಟ ಉಪಹಾರ ವಸತಿ ವೆಚ್ಚ ತಲಾ ರೂ 3000 ಗಳಂತೆ ಒಟ್ಟು ರೂ 6000/– ಕಂಟ್ಯಾಕ್ಟ ತರಗತಿಗಳನ್ನು ಶಿಬಿರಾರ್ಥಿಗಳ ಸಂಖ್ಯೆಯ ಆಧಾರದ ಮೇಲೆ ಬೆಂಗಳೂರು, ಮೈಸೂರು, ಬೆಳಗಾವಿ ಹಾಗೂ ಕಲಬುರಗಿ ವಿಭಾಗೀಯ ಕೇಂದ್ರಗಳಲ್ಲಿ ಮತ್ತು ಸಂಯುಕ್ತ ಸಹಕಾರಿಯು ನಿಗದಿಪಡಿಸುವ ರಾಜ್ಯದ ಇತರೆ ಕೇಂದ್ರಗಳಲ್ಲಿ ನಡೆಸಲಾಗುವುದು. 6 ತಿಂಗಳ ಅವಧಿಯಲ್ಲಿ ಒಂದು ಸಹಕಾರಿ ಸಂಸ್ಥೆಯ ಅಧ್ಯಯನ ವರದಿಯನ್ನು ಸಲ್ಲಿಸಬೇಕಾಗಿರುತ್ತದೆ.

ನವೆಂಬರ 15 ರಿಂದ ಪ್ರವೇಶ ಅರ್ಜಿ ಫಾರ್ಮಗಳನ್ನು ಹಾಗೂ ಕೋರ್ಸ್ ವಿವರಣಾ ಪತ್ರವನ್ನು ನೀಡಲಾಗುತ್ತದೆ.

ಡಿಸೆಂಬರ 15 ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನವಾಗಿರುತ್ತದೆ.

ಅರ್ಜಿ ಫಾರ್ಮ ಹಾಗೂ ಕೋರ್ಸ್ ವಿವರಣಾ ಪತ್ರ ಪಡೆಯಲು ಸ್ವವಿವರ ಹಾಗೂ ರೂ.100 ಗಳನ್ನು ಪೋಸ್ಟಲ್ ಆರ್ಡರ್‌ನ್ನು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಅಥವಾ ವಿಭಾಗೀಯ ಕಚೇರಿಗಳಿಗೆ ಕಳುಹಿಸುವುದು

ಹೆಚ್ಚಿನ ವಿವರಗಳಿಗೆ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ ಹಾಗೂ ಪ್ರಾಂತೀಯ ಕಛೇರಿಗಳನ್ನು ಸಂಪರ್ಕಿಸಬಹುದಾಗಿದೆ.

**ಸಂಪರ್ಕ ದೂರವಾಣಿಗಳು :**

**ಕೇಂದ್ರ ಕಛೇರಿ : 080–23378375–80, 23474408, 23573291**

**ಬೆಂಗಳೂರು ಪ್ರಾಂತೀಯ ಕಛೇರಿ: 080–23525546**

**ಮೈಸೂರು ಪ್ರಾಂತೀಯ ಕಛೇರಿ: 0821–2332299**

**ಬೆಳಗಾವಿ ಪ್ರಾಂತೀಯ ಕಛೇರಿ: 0831–2401551**

**ಕಲಬುರಗಿ ಪ್ರಾಂತೀಯ ಕಛೇರಿ: 08472–270222**

## ತೆಲಂಗಾಣ ಸಹಕಾರ ಇಲಾಖೆಯ ಆಯುಕ್ತ ಹಾಗೂ ಸಹಕಾರ ಸಂಘಗಳ ನಿಬಂಧಕರನ್ನು ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರ ನೇತೃತ್ವದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರ ಹಾಗೂ ಅಧಿಕಾರಗಳ ನಿಯೋಗದ ಭೇಟಿ

# ಕರ್ನಾಟಕದ ಸೌಹಾರ್ದ ಸಹಕಾರಿ ಕಾಯ್ದೆ ಹಾಗು ಸಂಯುಕ್ತ ಸಹಕಾರಿ ವ್ಯವಸ್ಥೆ ಅಧ್ಯಯನಕ್ಕೆ: ಕರ್ನಾಟಕಕ್ಕೆ ನಿಯೋಗ - ಶ್ರೀ ವೀರಭ್ರಮಯ್ಯ ಐ.ಎ.ಎಸ್. ನಿಬಂಧಕರು ತೆಲಂಗಾಣ



ತೆಲಂಗಾಣ ಸಹಕಾರ ಇಲಾಖೆಯ ಚುನಾವಣಾ ಪ್ರಾಧಿಕಾರದ ಆಯುಕ್ತರು ಶ್ರೀ ಶ್ರೀನಾಥಾಚಾರಿ ಹಾಗೂ ಇಲಾಖಾ ಅಧಿಕಾರಿಗಳೊಂದಿಗೆ ಚರ್ಚೆ



ತೆಲಂಗಾಣ ಸಹಕಾರಿಯ ಇಲಾಖೆಯ ನಿಬಂಧಕರಾದ ಶ್ರೀ ವೀರಭ್ರಮಯ್ಯ ಐ.ಎ.ಎಸ್. ಇವರಿಗೆ ಮನವಿ.

ಸಂಯುಕ್ತ ಸಹಕಾರಿ ಅಧ್ಯಕ್ಷ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರ ನೇತೃತ್ವದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಗುರುನಾಥ ಜಾಂತಿಕರ, ಶ್ರೀ ವೈ.ಟಿ.ಪಾಟೀಲ್ ಹಾಗೂ ಸಂಜೀವ ಮಹಾಜನ ರವರೂಂದಿಗೆ ಆಂಧ್ರ ಪ್ರದೇಶದ ಸಹಕಾರಿ ಮುಖಂಡ ಶ್ರೀ ರಘುನಾಥ ಬಾಬುರವರೂಂದಿಗೆ ಸಂಯುಕ್ತ ಸಹಕಾರಿಯ ಅಧಿಕಾರಿಗಳು ತೆಲಂಗಾಣ ಸಹಕಾರಿ ಆಯುಕ್ತ ಶ್ರೀ ವೀರಭ್ರಮಯ್ಯ ಐ.ಎ.ಎಸ್. ರವರನ್ನು ಹಾಗೂ ಜಂಟಿ ನಿಬಂಧಕ ಶ್ರೀನಾಥಾಚಾರಿ ರವರನ್ನು ಸಹಕಾರ ಇಲಾಖೆಯ ಪ್ರಮುಖ ಅಧಿಕಾರಿಗಳನ್ನು ಭೇಟಿಮಾಡಿ ಕರ್ನಾಟಕದ ಸೌಹಾರ್ದ ಸಹಕಾರಿ ಕಾಯ್ದೆಯ ವಿಶೇಷಗಳನ್ನು ಹಾಗೂ ಸಂಯುಕ್ತ ಸಹಕಾರಿ ಕಾರ್ಯಚಟುವಟಿಕೆಗಳನ್ನು ವಿವರಿಸಿದರು. ಸಹಕಾರಿ ಇಲಾಖೆಯ ಮಾನ್ಯ ನಿಬಂಧಕರು ಇವುಗಳನ್ನು ಅಧ್ಯಯನ ಮಾಡುವುದಕ್ಕಾಗಿ ಹಾಗೂ ತೆಲಂಗಾಣದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥೆಯನ್ನು ಜಾರಿಮಾಡಲು ಕ್ರಮವಿಡುವುದಕ್ಕಾಗಿ ಕರ್ನಾಟಕಕ್ಕೆ ಅಧಿಕಾರಿಗಳ ನಿಯೋಗವನ್ನು ಕಳುಹಿಸುವುದಾಗಿ ತಿಳಿಸಿದರು.

ಐಸಿಎಮ್ ಉಪನ್ಯಾಸಕ ಶ್ರೀ ಶಾಮಕುಮಾರರವರು ಈ ಭೇಟಿಯ ಹಾಗೂ ಅಧ್ಯಯನ ತಂಡದ ಸಂಚಾಲಕರಾಗಿ ಕಾರ್ಯನಿರ್ವಹಿಸಿದರು.

## ಸಂಯುಕ್ತ ಸಹಕಾರಿಯ ಅಧಿಕಾರಿಗಳ ತರಬೇತಿ ಹಾಗೂ ಅಧ್ಯಯನ ಪ್ರವಾಸ

# ಕರ್ನಾಟಕದ ಸೌಹಾರ್ದ ಸಹಕಾರಿ ದೇಶಕ್ಕೆ ಮಾದರಿ : ತಂಗಿರಾಲಾ, ನಿರ್ದೇಶಕರು ಐ.ಸಿ.ಎಮ್. ಹೈದರಾಬಾದ



ಉದ್ಘಾಟನೆ



ಹೆಚ್. ಎಸ್ ತಂಗಿರಾಲಾ, ನಿರ್ದೇಶಕರು, ಐ.ಸಿ.ಎಮ್. ಹೈದರಾಬಾದ್ ರವರಿಗೆ ಸನ್ಮಾನ



ಸಂಯುಕ್ತ ಸಹಕಾರಿಯ ಅಧ್ಯಕ್ಷರು, ನಿರ್ದೇಶಕರು ಹಾಗೂ ಐ.ಸಿ.ಎಮ್ ನಿರ್ದೇಶಕರಾದ ಶ್ರೀ ಹೆಚ್. ಎಸ್ ತಂಗಿರಾಲಾ ರವರೊಂದಿಗೆ ಶಿಬಿರಾರ್ಥಿಗಳು

**ಹೈದರಾಬಾದ್** : ಸಂಯುಕ್ತ ಸಹಕಾರಿಯ ಅಧಿಕಾರಿಗಳ 3 ದಿನಗಳ ಅಧ್ಯಯನ ಪ್ರವಾಸವನ್ನು ದಿನಾಂಕ 30–9–2018 ರಿಂದ 2–10–2018 ರವರೆಗೆ ತೆಲಂಗಾಣಾ ಸಹಕಾರಿ ಕಾಯ್ದೆ 1964 ಹಾಗೂ ಮುಚ್ಯುಯಲ್ ಸಹಕಾರಿ ಕಾಯ್ದೆ 1995 ಇವುಗಳ ಅಧ್ಯಯನ ಹಾಗೂ ವಿವಿಧ ಸಹಕಾರಿ ಸಂಸ್ಥೆಗಳಿಗೆ ಭೇಟಿಯ ಕಾರ್ಯಕ್ರಮವನ್ನು ಹೈದರಾಬಾದ ಸಹಕಾರಿ ಆಡಳಿತ ನಿರ್ವಹಣಾ ಸಂಸ್ಥೆ (ಐ.ಸಿ.ಎಮ್.) ನಲ್ಲಿ ಏರ್ಪಡಿಸಲಾಗಿತ್ತು. ಕಾರ್ಯಕ್ರಮವನ್ನು ಐ.ಸಿ.ಎಮ್.ನ ನಿರ್ದೇಶಕರಾದ ಶ್ರೀ ಹೆಚ್.ಎಸ್.ತಂಗಿರಾಲಾ ರವರು ಉದ್ಘಾಟಿಸಿ ಮಾತನಾಡುತ್ತ ಕರ್ನಾಟಕದ ಸೌಹಾರ್ದ ಸಹಕಾರಿ ಕಾಯ್ದೆ ಅದರ ಚಟುವಟಿಕೆಗಳು ಅತ್ಯಂತ ಉತ್ತಮವಾಗಿವೆ. ದೇಶದಲ್ಲಿಯೇ ಮಾದರಿಯಾಗಿವೆ. ಸ್ವಾಯತ್ತ ಸಹಕಾರಿ ಕಾಯ್ದೆಯ ಉಗಮ ಆಚಿಧ್ರದಲ್ಲಿ ಪ್ರಪ್ರಥಮವಾಗಿ ಪ್ರಾರಂಭವಾಗಿದ್ದರೂ ಸಹ ಕರ್ನಾಟಕ ಅದನ್ನು ಉತ್ತಮವಾಗಿ ಕಾರ್ಯನಿರ್ವಹಿಸುವಂತೆ ಕ್ರಮವಿಟ್ಟಿರುವುದು ಸ್ವಾಗತಾರ್ಹ. ಈ ಕಾಯ್ದೆಯ ಅನುಷ್ಠಾನ ದೇಶಾದ್ಯಂತ ವಿಸ್ತರಿಸುವ ಅಗತ್ಯವನ್ನು ಒತ್ತಿ ಹೇಳಿದರು. ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿ ಕಾಯ್ದೆಯನ್ನು ದೇಶದಾದ್ಯಂತ ವಿಸ್ತರಿಸುವ ಬಗ್ಗೆ ಅಗತ್ಯ ಕ್ರಮವಿಡುವ ಜೊತೆಗೆ ಕಾಯ್ದೆಯ ವಕ್ತಾರನಾಗಿ ಸಲಹೆಗಾರನಾಗಿ ವಿವಿಧ ರಾಜ್ಯಗಳಿಗೆ ಭೇಟಿ ನೀಡುವ ಬಗ್ಗೆಯೂ ಚಿಂತಿಸುವ ಅಗತ್ಯವನ್ನು ಹೇಳಿದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಗುರುನಾಥ ಜಾಂತಿಕರ ಶ್ರೀ ವೈ.ಟಿ.ಪಾಟೀಲ್, ಶ್ರೀ ಸಂಜೀವ ಮಹಾಜನ ಉಪಸ್ಥಿತರಿದ್ದು ಅಗತ್ಯ ಮಾರ್ಗದರ್ಶನ ನೀಡಿದರು.

ಕಾರ್ಯಕ್ರಮದಲ್ಲಿ ತೆಲಂಗಾಣ ಸಹಕಾರ ಇಲಾಖೆಯ ಉಪನಿಬಂಧಕರಾದ ಶ್ರೀ ಜನಾರ್ಧನರೆಡ್ಡಿಯವರು ತೆಲಂಗಾಣಾ ಸಹಕಾರಿ ಕಾಯ್ದೆಯ ಬಗ್ಗೆ ಹಾಗೂ ಶ್ರೀ ನರಸಿಂಹರೆಡ್ಡಿಯವರು ಮ್ಯುಚ್ಯುಯಲ್ ಸಹಕಾರಿ ಕಾಯ್ದೆಯ ಬಗ್ಗೆ ಉಪನ್ಯಾಸ ನೀಡಿದರು. ಕಾರ್ಯಕ್ರಮದ ಸಂಚಾಲಕ ಹಾಗೂ ಐಸಿಎಮ್ ಉಪನ್ಯಾಸಕ ಶ್ರೀ ರಾಜಕುಮಾರ ಜನ್ನೆಲ ರವರು ಎರಡು ಕಾಯ್ದೆಗಳ ವ್ಯತ್ಯಾಸಗಳ ವಿವರಗಳನ್ನು ತಿಳಿಸಿದರು. ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ.ಜಿ.ಪಾಟೀಲ್‌ರವರು ಸ್ವಾಗತಿಸಿ ಪ್ರಾಸ್ತಾವಿಕ ಭಾಷಣ ಮಾಡಿದರು. ತರಬೇತಿ ಅಧಿಕಾರಿ ಶ್ರೀ ವಿ.ಜಿ.ಕಾರಕೂನ ವಂದನಾರ್ಪಣೆ ಮಾಡಿದರು. ಸಂಯುಕ್ತ ಸಹಕಾರಿಯ 22 ಅಧಿಕಾರಿಗಳು ಹಾಗೂ ಶಿಕ್ಷಣ ವಿಭಾಗದ 3 ಹಾಗೂ ಇತರೆ 2 ಒಟ್ಟಾರೆ 27 ಜನರು ಭಾಗವಹಿಸಿ ಪ್ರಯೋಜನ ಪಡೆದರು.

## ಮಹೇಶ ಸಹಕಾರ ಬ್ಯಾಂಕ್‌ಗೆ ಭೇಟಿ




ಕಾರ್ಯಕ್ರಮದ ಅಂಗವಾಗಿ ದಿನಾಂಕ 1–10–2018 ರಂದು ದಕ್ಷಿಣ ಭಾರತದ ದೊಡ್ಡ ಸಹಕಾರ ಬ್ಯಾಂಕ ಹೈದರಾಬಾದ ನಗರದ ಮಹೇಶ ಸಹಕಾರ ಬ್ಯಾಂಕಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿಯರು ಹಾಗೂ ನಿರ್ದೇಶಕರುಗಳಾದ ಶ್ರೀ ಗುರುನಾಥ ಜಾಂತಿಕರ, ಶ್ರೀ ವೈ.ಟಿ.ಪಾಟೀಲ್ ಹಾಗೂ ಶ್ರೀ ಸಂಜೀವ ಮಹಾಜನರವರುಗಳೊಂದಿಗೆ ಭೇಟಿ ನೀಡಿ ಅಧ್ಯಯನ ಮಾಡಲಾಯಿತು. ಬ್ಯಾಂಕಿನ ಅಧ್ಯಕ್ಷರಾದ ಶ್ರೀ ರಮೇಶಕುಮಾರ ಬಂಗರವರು ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಉಮೇಶಚಂದ ಓಸ್ವಾಲರವರು ಹಾರ್ದಿಕವಾಗಿ ಸ್ವಾಗತಿಸಿದರು.

1978ರಲ್ಲಿ ಸ್ಥಾಪನೆಯಾಗಿರುವ ಈ ಬ್ಯಾಂಕು ಶೆಡ್ಯೂಲ್ ಬ್ಯಾಂಕ ಆಗಿದೆ. ಮಲ್ಟಿ ಸ್ಟೇಟಸ್ ಕಾಯ್ದೆಯಡಿ ಕಾರ್ಯನಿರ್ವಹಿಸುತ್ತಿದೆ. ಬ್ಯಾಂಕು ಈಗ ತೆಲಂಗಾಣದಲ್ಲಿ 38, ಆಂಧ್ರದಲ್ಲಿ 4, ರಾಜಸ್ಥಾನದಲ್ಲಿ 2 ಹಾಗೂ ಮಹಾರಾಷ್ಟ್ರದಲ್ಲಿ 1 ಹೀಗೆ 45 ಶಾಖೆಗಳನ್ನು ಹೊಂದಿದೆ. 2306 ಕೋಟಿ ರೊಗಳ ಠೇವಣಿ ಹೊಂದಿದೆ. 3500 ಕೋಟಿ ರೂಗಳ ವ್ಯವಹಾರವನ್ನು ಮಾಡುತ್ತಿದೆ. 0% ಎನ್.ಪಿ ಇದೆ. ಎಂದು ಬ್ಯಾಂಕಿನ ಪೂರ್ಣ ವಿವರಗಳನ್ನು ನೀಡಿದರು. ನಂತರ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಕರ್ನಾಟಕದ ಸಂಯುಕ್ತ ಸಹಕಾರಿಯ ಚಟುವಟಿಕೆಗಳನ್ನು ಹಾಗೂ ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಯ ವಿವರಗಳನ್ನು ನೀಡಿದರು. ಮಹೇಶ ಸಹಕಾರಿ ಬ್ಯಾಂಕಿನ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಯ ಹಾಗೂ ಸಂಯುಕ್ತ ಸಹಕಾರಿ ಚಟುವಟಿಕೆಗಳನ್ನು ಅಧ್ಯಯನ ವಿವರಗಳನ್ನು ತಿಳಿದು ಅದರ ಬಗ್ಗೆ ಸಂತೋಷ ವ್ಯಕ್ತಪಡಿಸಿ ಇದೂಂದು ವಿಭಿನ್ನ ಹಾಗು ಅತ್ಯಂತ ಉತ್ತಮ ವ್ಯವಸ್ಥೆಯಾಗಿದೆ. ದೇಶದ ಎಲ್ಲ ರಾಜ್ಯಗಳಲ್ಲೂ ಇದು ಜಾರಿಗೆ ಬರಬೇಕು ಎಂದು ತಮ್ಮ ಅಭಿಪ್ರಾಯ ವ್ಯಕ್ತ ಪಡಿಸಿದರು.

ನಂತರದಲ್ಲಿ ತೆಲಂಗಾಣಾ ರಾಜ್ಯ ಸಹಕಾರ ಯೂನಿಯನಿಗೆ ಭೇಟಿ ನೀಡಿ ರಾಜ್ಯದ ಶಿಕ್ಷಣ ಹಾಗೂ ತರಬೇತಿ ವ್ಯವಸ್ಥೆಗಳನ್ನು ಅಧ್ಯಯನ ಮಾಡಲಾಯಿತು.

## ಆಡಳಿತ ಮಂಡಳಿ ಪರಿಣಿತಿ ತರಬೇತಿ



**ಚಾಮರಾಜನಗರ** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ಮೈಸೂರು ಪ್ರಾಂತೀಯ ಕಛೇರಿಯಿಂದ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಹಾಗೂ ನಿರ್ದೇಶಕರುಗಳಿಗಾಗಿ ಒಂದು ದಿನದ ಆಡಳಿತ ಮಂಡಲಿ ಸದಸ್ಯರ ಪರಿಣಿತಿ ತರಬೇತಿ ಕಾರ್ಯಕ್ರಮವನ್ನು ದಿನಾಂಕ : 04.09.2018 ರಂದು ಮಹಾಮನೆ ಸಭಾಂಗಣ, ರೋಟರಿ ಭವನ ಹಿಂಭಾಗ, ಬಿ.ರಾಚಯ್ಯ ರಸ್ತೆ, ಡಬ್ಬಲ್ ರೋಡ್, ಚಾಮರಾಜನಗರ ಟೌನ್‌ನಲ್ಲಿ ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮವನ್ನು ಚಾಮರಾಜನಗರದ ಸಹಾಯಕ ನಿಬಂಧಕರಾದ ರಮೇಶ್ ಕುಮಾರ್‌ರವರು ಹಾಗೂ ವೇದಿಕೆ ಮೇಲಿದ್ದ ಇತರ ಗಣ್ಯರೊಂದಿಗೆ ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಇದರ ಅಧ್ಯಕ್ಷರಾದ ಶ್ರೀ ಎಸ್ ಬಾಲಸುಬ್ರಹ್ಮಣ್ಯ ರವರು ವಹಿಸಿದ್ದರು.

ಸಂಯುಕ್ತ ಸಹಕಾರಿಯ ಹಿರಿಯ ಅಧಿಕಾರಿಯಾದ ಶ್ರೀ ಗುರುಪ್ರಸಾದ್ ಬಂಗೇರರವರು, ಸೌಹಾರ್ದ ಅಭಿವೃದ್ಧಿ ಅಧಕಾರಿಗಳಾದ ಶ್ರೀ ಚಂದ್ರಶೇಖರಯ್ಯ ಹಾಗೂ ಶ್ರೀ ಶಿವಕುಮಾರ್‌ರವರು ಉಪಸ್ಥಿತರಿದ್ದರು. ಈ ತರಬೇತಿ ಕಾರ್ಯಕ್ರಮದಲ್ಲಿ 11 ಸೌಹಾರ್ದ ಸಹಕಾರಿಗಳಿಂದ 37 ಪ್ರತಿನಿಧಿಗಳು ಭಾಗವಹಿಸಿದ್ದರು.

## ಕೋಲಾರ ಜಿಲ್ಲಾ ಸಂಪರ್ಕ ಕಛೇರಿ ಉದ್ಘಾಟನಾ ಕಾರ್ಯಕ್ರಮ

**ಕೋಲಾರ** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಕೋಲಾರ ಜಿಲ್ಲಾ ಸಂಪರ್ಕ ಕಛೇರಿಯ ಉದ್ಘಾಟನಾ ಕಾರ್ಯಕ್ರಮವನ್ನು ದಿನಾಂಕ : 05.09.2018 ರಂದು ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ-ಆಪರೇಟಿವ್ ಲಿ., ಕೋಲಾರ ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಉದ್ಘಾಟನಾ ಕಾರ್ಯಕ್ರಮವನ್ನು ಕೋಲಾರ ಜಿಲ್ಲೆಯ ಸಹಾಯಕ ನಿಬಂಧಕರಾದ ಶ್ರೀ ನಾಗರಾಜೇಗೌಡ ಸಿ.ವಿ. ರವರು ನರವೇರಿಸಿದರು.





## ಚಿಕ್ಕಬಳ್ಳಾಪುರ ಜಿಲ್ಲಾ ಸಂಪರ್ಕ ಕಛೇರಿ ಉದ್ಘಾಟನಾ ಕಾರ್ಯಕ್ರಮ

**ಚಿಕ್ಕಬಳ್ಳಾಪುರ** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಚಿಕ್ಕಬಳ್ಳಾಪುರ ಜಿಲ್ಲಾ ಸಂಪರ್ಕ ಕಛೇರಿಯ ಉದ್ಘಾಟನಾ ಕಾರ್ಯಕ್ರಮವನ್ನು ದಿನಾಂಕ; 05.09.2018 ರಂದು ಶ್ರೀ ವಾಸವಿ ಕನ್ನಿಕಾ ಪರಮೇಶ್ವರಿ ಸೌಹಾರ್ದ ಸಹಕಾರಿ ನಿ,. ಚಿಕ್ಕಬಳ್ಳಾಪುರ ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಛೇರಿಯ ಉದ್ಘಾಟನೆಯನ್ನು ಸಹಾಯಕ ನಿಬಂಧಕರಾದ ಶ್ರೀ ಆರೀಫ್ ರವರು ನರವೇರಿಸಿದರು.

## ಹಾವೇರಿ ಜಿಲ್ಲಾ ಸಂಪರ್ಕ ಕಛೇರಿ ಉದ್ಘಾಟನಾ ಕಾರ್ಯಕ್ರಮ

**ಹಾವೇರಿ** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಹಾವೇರಿ ಜಿಲ್ಲಾ ಸಂಪರ್ಕ ಕಛೇರಿಯ ಉದ್ಘಾಟನಾ ಕಾರ್ಯಕ್ರಮವನ್ನು ದಿನಾಂಕ; 14.09.2018 ರಂದು ಸಮರ್ಥ ಸದ್ಗುರು ಸೌಹಾರ್ದ ಸಹಕಾರಿ ನಿ,. ಹಾವೇರಿ ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಛೇರಿಯ ಉದ್ಘಾಟನೆಯನ್ನು ಶ್ರೀ ಮ ನಿ ಪ್ರ ಸದಾಶಿವ ಮಹಾಸ್ವಾಮಿಗಳ ಸಾನಿದ್ಯದಲ್ಲಿ ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಾರುತಿ ಬಿ. ಕಲಾಲ ರವರು ನೆರವೇರಿಸಿದರು.





## ತರಬೇತಿ ಕಾರ್ಯಕ್ರಮ

**ತೀರ್ಥಹಳ್ಳಿ** : ತೀರ್ಥಹಳ್ಳಿ ತಾಲ್ಲೂಕಿನ ಸೌಹಾರ್ದ ಸಹಕಾರಿಯ ಮುಖ್ಯ ಕಾರ್ಯನಿರ್ವಹಕರಿಗೆ sec,34ರ ಬಗ್ಗೆ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎ.ಆರ್ ಪ್ರಸನ್ನಕುಮಾರ್ ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶಶಿಕುಮಾರ ರವರು ಮಾಹಿತಿ ನೀಡಿದರು.

## ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಜಿಲ್ಲಾವಾರು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳ ಹೆಸರು ಹಾಗೂ ಸಂಪರ್ಕ ದೂರವಾಣಿ ಸಂಖ್ಯೆ

| ಕ್ರ.ಸಂ. | ಸಿಬ್ಬಂದಿಯ ಹೆಸರು | ಜಿಲ್ಲೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಶಶಿಕುಮಾರ್ ಎಸ್. | ಶಿವಮೊಗ್ಗ | 8884460261 |
| 2 | ರಾಜೇಶ್. ಕೆ.ಎಂ | ರಾಮನಗರ & ಬೆಂಗಳೂರು ಗ್ರಾಮಾಂತರ | 8884460263 |
| 3 | ನಟರಾಜ | ಚಿತ್ರದುರ್ಗ & ದಾವಣಗೆರೆ | 8884460264 |
| 4 | ಉಮೇಶ ಎ.ಎಸ್ | ಚಿಕ್ಕಬಳ್ಳಾಪುರ & ಕೋಲಾರ | 9513566604 |
| 5 | ರವಿಕುಮಾರ್ ಕೆ.ಆರ್ | ತುಮಕೂರು | 9513566609 |
| 6 | ಕುಶಾಲ್ ಹೆಚ್.ಎಂ | ಬೆಂಗಳೂರು ಮಹಾನಗರ | 9513566613 |
| 7 | ಬಸವರಾಜ ಹೊಂಗಲ | ಬೈಲಹೊಂಗಲ, ಸವದತ್ತಿ, ಖಾನಪುರ, ರಾಮದುರ್ಗ, ಕಿತ್ತೂರು, ಹೀರೆಬಾಗೇವಾಡಿ ತಾಲೂಕು | 8884466719 |
| 8 | ಸಂತೋಷ ಬಸಣ್ಣವರ್ | ಬೆಳಗಾವಿ ತಾಲೂಕು | 8884466723 |
| 9 | ವೃಷಭನಾಥ ಪರಪ್ಪನವರ | ಹುಕ್ಕೇರಿ | 8884460268 |
| 10 | ಗಂಗಾರಾಮ ಸಗ್ಗು ಕೊಳಪಾಟೆ | ಕಾರವಾರ | 8884460262 |
| 11 | ಪ್ರಭಯ್ಯ ಹಿರೇಮಠ | ಧಾರವಾಡ & ಗದಗ | 8884460269 |
| 12 | ಜವಹಾರ ಮೊಗ್ಗನವರ್ | ಅಥನಿ, ಚಿಕ್ಕೋಡಿ, ರಾಯಭಾಗ ತಾಲೂಕು | 9513566607 |
| 13 | ಕಲ್ಮೇಶ್ ಸಂಗಪ್ಪ ಮೆಡಕಣ್ಣವರ್ | ಹಾವೇರಿ | 9513566615 |
| 14 | ನವೀನ ಎಂ | ಬೆಂಗಳೂರು | 9513566610 |
| 15 | ಸುಜಯ್ ಡಿ ಬೆಳವಿ | ಗೋಕಾಕ & ಹುಕ್ಕೇರಿ–2 | 9513566614 |
| 16 | ನಾಗರಾಜ ಜಿ ಹೆಚ್ | ಬಾಗಲಕೋಟೆ | 9513566608 |
| 17 | ಪವನ್ ಎಂ ಆರ್ | ಕೊಪ್ಪಳ | 9513566605 |
| 18 | ಶಿವಕಾಂತ ಎನ್ | ವಿಜಯಪುರ | 8884466725 |
| 19 | ವೀರಶೆಟ್ಟಿ | ಬೀದರ್ | 8884460270 |
| 20 | ಓಂಕಾರ ಧರಣೆ | ಕಲಬುರಗಿ | 8884460274 |
| 21 | ಬಸವರಾಜ ಎಸ್.ಟಿ | ಯಾದಗಿರಿ | 8884460272 |
| 22 | ವೆಂಕಟೇಶ ರಾಠೋಡ | ರಾಯಚೂರು | 8884466731 |
| 23 | ಗುರುಪ್ರಸಾದ್ ಬಂಗೇರ | ಮಂಗಳೂರು | 8884466713 |
| 24 | ಸುರೇಶ. ಆರ್.ಎಸ್ | ಮೈಸೂರು & ಮಡಿಕೇರಿ | 8884466717 |
| 25 | ವಿಜಯ ಬಿ.ಎಸ್ | ಉಡುಪಿ | 8884460275 |
| 26 | ಚಂದ್ರಶೇಖರಯ್ಯ ಎಂ. | ಚಾಮರಾಜನಗರ & ಮಂಡ್ಯ | 8884460266 |
| 27 | ಸಂತೋಷ ಕುಮಾರ್ ಎಂ ಜೆ | ಹಾಸನ & ಚಿಕ್ಕಮಗಳೂರು | 9513566612 |

## ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಜಿಲ್ಲಾವಾರು ಸಂಪರ್ಕ ಕಛೇರಿಗಳ ವಿಳಾಸ

| ಕ್ರ.ಸಂ. | ಜಿಲ್ಲೆ | ಜಿಲ್ಲಾ ಸಂರ್ಪಕ ಕಛೇರಿಯ ವಿಳಾಸ |
|---|---|---|
| 1 | ಬೆಂಗಳೂರು ನಗರ | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಜಿಲ್ಲಾ ಸಂಪರ್ಕ ಕಛೇರಿ ಕೇರ್/ಆಫ್ – ಬೆಂಗಳೂರು ಪ್ರಾಂತೀಯ ಕಛೇರಿ : ನಂ. 141, 1ನೇ ಮೈನ್, 11ನೇ ಕ್ರಾಸ್, ಡಾ.ರಾಜ್‌ಕುಮಾರ ರಸ್ತೆ, 1–ಕೆ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010. |
| 2 | ಚಿತ್ರದುರ್ಗ | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಜಿಲ್ಲಾ ಸಂಪರ್ಕ ಕಛೇರಿ ಕೇರ್/ಆಫ್ ಮರ್ಚಂಟ್ ಸೌಹಾರ್ದ ಸಹಕಾರಿ ಬ್ಯಾಂಕ್, ಸಂತೆಪೇಟೆ,ಗಾಂಧಿ ಸರ್ಕಲ್ ಹತ್ತಿರ, ಚಿತ್ರದುರ್ಗ–577501 |
| 3 | ದಾವಣಗೆರೆ | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಜಿಲ್ಲಾ ಸಂಪರ್ಕ ಕಛೇರಿ ಕೇರ್/ಆಫ್ ಮನಿಪ್ಲಾಂಟ್ ಮಲ್ಟಿಪರ್ಪಸ್ ಸೌಹಾರ್ದ ಕೋ–ಆಪರೇಟಿವ್ ಲಿ.,#185/2 & 5ಎ, 185/ಬಿ, ಮುದ್ದೇಗೌಡ್ರು ಕಟ್ಟಡ, ಎಚ್ ಎಮ್ ರಸ್ತೆ, ದಾವಣಗೆರೆ–577001 |
| 4 | ಕೋಲಾರ | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಜಿಲ್ಲಾ ಸಂಪರ್ಕ ಕಛೇರಿ ಕೇರ್/ಆಫ್ ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ–ಆಪರೇಟಿವ್ ಲಿ,. ನಂ3, ಮೊದಲನೆಯ ಮಹಡಿ, ಎಂ ಜಿ ರಸ್ತೆ, ಕೋಲಾರ–563101 |
| 5 | ಚಿಕ್ಕಬಳ್ಳಾಪುರ | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಜಿಲ್ಲಾ ಸಂಪರ್ಕ ಕಛೇರಿ ಕೇರ್/ಆಫ್ ಶ್ರೀ ವಾಸವಿ ಕನ್ನಿಕಾ ಪರಮೇಶ್ವರಿ ಸೌಹಾರ್ದ ಸಹಕಾರಿ ನಿಯಮಿತ, #919/822, ನಗರ್ತಪೇಟೆ, ಭುವನೇಶ್ವರಿ ವೃತ್ತ, ಪೋಸ್ಟ್ ಆಫೀಸ್ ಮೇಲೆ, ಚಿಕ್ಕಬಳ್ಳಾಪುರ. |
| 6 | ರಾಮನಗರ | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಜಿಲ್ಲಾ ಸಂಪರ್ಕ ಕಛೇರಿ ಕೇರ್/ಆಫ್ ಡಿ. ದೇವರಾಜು ಅರಸು ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ, ನಂ–7, ಸ್ಫೂರ್ತಿ ಭವನ, ತಾಲ್ಲೂಕು ಕಛೇರಿ ಹಿಂಭಾಗ, ರಾಮನಗರ–562159 |
| 7 | ಬೆಂಗಳೂರು ಗ್ರಾಮಾಂತರ | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಜಿಲ್ಲಾ ಸಂಪರ್ಕ ಕಛೇರಿ ಕೇರ್/ಆಫ್ ಶ್ರೀ ಅರುಣೋದಯ ಸೌಹಾರ್ದ ಸಹಕಾರಿ ನಿಯಮಿತ, 1ನೇ ಮಹಡಿ, ಓರಿಯಂಟಲ್ ಬ್ಯಾಂಕ್ ಆಫ್ ಕಾಮರ್ಸ್ ಎದುರು, ಎಮ್ ಆರ್ ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ–562159 |
| 8 | ತುಮಕೂರು | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಜಿಲ್ಲಾ ಸಂಪರ್ಕ ಕಛೇರಿ ಕೇರ್/ಆಫ್ ಶ್ರೀ ಶಿವಾಜಿ ಸೌಹಾರ್ದ ಪತ್ತಿನ ಸಹಕಾರ ನಿಯಮಿತ, 2ನೇ ಮಹಡಿ, ಕೋತಿ ತೋಪು, ಸರ್ವೋದಯ ಕಾಲೇಜು ಮುಂಭಾಗ, ತುಮಕೂರು–572101 |
| 9 | ಶಿವಮೊಗ್ಗ | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಜಿಲ್ಲಾ ಸಂಪರ್ಕ ಕಛೇರಿ ಕೇರ್/ಆಫ್ ವಿಪ್ರ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಶಾಖೆ, 1ನೇ ಮಹಡಿ, ಕೃಷಿ & ಗ್ರಾಮೀಣ ಅಭಿವೃದ್ಧಿ ಬ್ಯಾಂಕ್, ಆರ್ ಟಿ, ಒ ರಸ್ತೆ, ಶಿವಮೊಗ್ಗ–577201 |
| 10 | ಮೈಸೂರು | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು ವಿಭಾಗೀಯ ಕಛೇರಿ, ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನ ಹತ್ತಿರ, ಮೈಸೂರು. |
| 11 | ಮಂಡ್ಯ | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಜಿಲ್ಲಾ ಸಂಪರ್ಕ ಕಛೇರಿ ಕೇರ್/ಆಫ್ ಮಂಡ್ಯ ಜಿಲ್ಲಾ ಶ್ರೀ ಶ್ರೀ ಜಗಜ್ಯೋತಿ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ನಂ. ಡಿ5/147/1160/4ಎ, ರೂಪ್ ಮಿಲನ್ ಬಟ್ಟೆ ಅಂಗಡಿ, 1ನೇ ಮಹಡಿ, ಅಪೂರ್ವದರ್ಶಿನಿ ಮುಂಭಾಗ, ವಿ.ವಿ.ರಸ್ತೆ, ಮಂಡ್ಯ. |
| 12 | ಚಾಮರಾಜನಗರ | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಜಿಲ್ಲಾ ಸಂಪರ್ಕ ಕಛೇರಿ ಕೇರ್/ಆಫ್ ಮರ್ಚೆಂಟ್ಸ್ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ., ಸಂಪಿಗೆ ರಸ್ತೆ, ತರಕಾರಿ ಮಾರುಕಟ್ಟೆ ಹತ್ತಿರ, ಚೌಡೇಶ್ವರಿ ಕಾಂಪ್ಲೆಕ್ಸ್, ಚಾಮರಾಜನಗರ. |
| 13 | ಹಾಸನ | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಜಿಲ್ಲಾ ಸಂಪರ್ಕ ಕಛೇರಿ ಕೇರ್/ಆಫ್, ಶ್ರೀ ಪುಷ್ಪಗಿರಿ ಸೌಹಾರ್ದ ಸಹಕಾರಿ ನಿ., ನ್ಯೂ ಲೈನ್ ರಸ್ತೆ, ನಾರ್ತ್ ಎಕ್ಸಟೆನ್ಷನ್, ಶರಣ ಸದನ, ಹಾಸನ. |
| 14 | ಉಡುಪಿ | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಜಿಲ್ಲಾ ಸಂಪರ್ಕ ಕಛೇರಿ ಕೇರ್/ಆಫ್ ನಿರ್ಮಾಣ್ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ನಂ.107(1), 2ನೇ ಮಹಡಿ, ಕೃಷ್ಣಾ ಕಟ್ಟಡ, ಕೋರ್ಟ್ ರಸ್ತೆ, ತಾಲೂಕು ಕಛೇರಿ ಸರ್ಕಲ್, ಉಡುಪಿ. |

| | | |
|---|---|---|
| 15 | ದಕ್ಷಿಣ ಕನ್ನಡ | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಜಿಲ್ಲಾ ಸಂಪರ್ಕ ಕಛೇರಿ ಕೇರ್/ಆಫ್ ಮಕರ ಜ್ಯೋತಿ ಚಿಟ್ಸ್ ಪ್ರವೇಟ್ ಲಿ., ನೆಲ ಮಹಡಿ, ಐಡಿಬಿಐ ಬ್ಯಾಂಕ್ ಎದುರು, ಅಡೋನಿ ಟವರ್ಸ್, ಕಂಕನಾಡಿ–ಫಳ್ನೀರ್ ರಸ್ತೆ, ಮಂಗಳೂರು–575002. |
| 16 | ಕೊಡಗು | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಜಿಲ್ಲಾ ಸಂಪರ್ಕ ಕಛೇರಿ ಕೇರ್/ಆಫ್ ಕೊಡಗು ವಿದ್ಯಾ ಇಲಾಖಾ ನೌಕರರ ಪತ್ತಿನ ಸೌಹಾರ್ದ ಸಹಕಾರಿ ನಿ., "ಸೌಹಾರ್ದ ಸೌರಭ", ಮೊದಲನೇ ಮಹಡಿ, ವಿಜಯ ಬ್ಯಾಂಕ್ ಹತ್ತಿರ, ಬಾಟಾ ಶೂ ಶೋ ರೂಮ್ ಮಹಡಿ ಮೇಲೆ, ಮುಖ್ಯ ರಸ್ತೆ, ಮಡಿಕೇರಿ, ಕೊಡಗು–571201 |
| 17 | ಬೆಳಗಾವಿ | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಜಿಲ್ಲಾ ಸಂಪರ್ಕ ಕಛೇರಿ –ಬೆಳಗಾವಿ ಕೇರ್/ಆಫ್– ಬೆಳಗಾವಿ ಪ್ರಾಂತೀಯ ಕಛೇರಿ ಸಂಜೋಗ ಕಟ್ಟಡ, ಪಿ & ಟಿ ಕ್ವಾಟ್ರಸ್ ಹತ್ತಿರ, ಜೋಡು ರಸ್ತೆ, ಮಹಂತೇಶ್ ನಗರ ಬೆಳಗಾವಿ |
| 18 | ಗದಗ | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಜಿಲ್ಲಾ ಸಂಪರ್ಕ ಕಛೇರಿ –ಗದಗ ಕೇರ್/ಆಫ್– ಫ್ಲಾಟ್ ನಂ. 01, ಎ. ಪಿ. ಎಂ. ಸಿ. ಯಾರ್ಡ್, ವಿವೇಕನಂದ ಸಾಬಭವಾನ ರಸ್ತೆ, ಗದಗ–582101 |
| 19 | ಹಾವೇರಿ | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಜಿಲ್ಲಾ ಸಂಪರ್ಕ ಕಛೇರಿ ಹಾವೇರಿ ವಿಳಾಸ ಶ್ರೀ ಸಮರ್ಥ ಸದ್ಗುರು ಸೌಹಾರ್ದ ಸಹಕಾರಿ ನಿ, ಗುತ್ತಲ ರೋಡ್ ಶಿವಲಿಂಗ ನಗರ, ಬನಶಂಕರಿ ಗುಡಿ ಹತ್ತಿರ ಹಾವೇರಿ ಫೋನ್ ನಂಬರ್ : 9513566615 ಇಮೇಲ್: hvrsdo@souharda |
| 20 | ಧಾರವಾಡ | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಜಿಲ್ಲಾ ಸಂಪರ್ಕ ಕಛೇರಿ, ಹಳೇ ಹುಬ್ಬಳ್ಳಿ, ಶ್ರೀ ಸಿದ್ಧರೂಡರ ಮಾರ್ಗ, ಕಿಲ್ಲ ಹಳೇ ಹುಬ್ಬಳ್ಳಿ, ಧಾರವಾಡ. ಮೊ:8884460269 |
| 21 | ಉತ್ತರ ಕನ್ನಡ | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಜಿಲ್ಲಾ ಸಂಪರ್ಕ ಕಛೇರಿ–ಉತ್ತರ ಕನ್ನಡ ಕೇರ್/ಆಫ್– ಸ್ಕೊಡ್‌ವೆಸ್ ಮಹಿಳಾ ಸೌಹಾರ್ದ ಸಹಕಾರಿ ನಿ., ಸವಿ ನಿಲಯ ಕಟ್ಟಡ, ಮರಾಠಿ ಕೊಪ್ಪ ಮುಖ್ಯ ರಸ್ತೆ, ಶಿರಸಿ, ಉತ್ತರ ಕನ್ನಡ, 581402 |
| 22 | ವಿಜಯಪುರ | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ಜಿಲ್ಲಾ ಸಂಪರ್ಕ ಕಛೇರಿ –ವಿಜಯಪುರ ಕೇರ್/ಆಫ್– ಕೃಷ್ಣ ಕಾಂಪ್ಲೆಕ್ಸ್, ಮೊದಲನೇ ಮಹಡಿ, ಅಂಗಡಿ ನಂ. 08, ಸಿದ್ದೇಶ್ವರ ದೇವಲಯ ರಸ್ತೆ, ಸುಧೀಖ ಮೆಡಿಕಲ್ ಹತ್ತಿರ, ವಿಜಯಪುರ–586101 |
| 23 | ಬಾಗಲಕೋಟೆ | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಜಿಲ್ಲಾ ಸಂಪರ್ಕ ಕಛೇರಿ – ಬಾಗಲಕೋಟೆ ಕೇರ್/ಆಫ್– ಬಾಪೂಜಿ ಪತ್ತಿನ ಸೌಹಾರ್ದ ಸಹಕಾರಿ ನಿ.,ವಲ್ಲಭಾಯಿ ಚೌಕಾ, ಬಾಗಲಕೋಟೆ –587101 |
| 24 | ಬೀದರ | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಜಿಲ್ಲಾ ಸಂಪರ್ಕ ಕಛೇರಿ ಕೇರ್/ಆಫ್, ಬೀದರ ಜಿಲ್ಲಾ ಸಂಪರ್ಕ ಕಛೇರಿ ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಸಾಯಿ ಪುಸ್ಪಾಂಜಲಿ ಕಲ್ಯಾಣ ಮಂಟಪ ನೆಹರು ಕ್ರೀಡಾಂಗಣ ರಸ್ತೆ ಬೀದರ |
| 25 | ಕಲಬುರಗಿ | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಜಿಲ್ಲಾ ಸಂಪರ್ಕ ಕಛೇರಿ ಕೇರ್/ಆಫ್, ಕಲಬುರಗಿ ಪ್ರಾಂತೀಯ ಕಛೇರಿ 1–4/3 ಎ ಸಂಜಿವರಾವ ದೇಸಾಯಿ ಬಡಾವಣೆ ಕೆ ಎಸ್ ಆರ್ ಟಿ ಸಿ ಗೆಸ್ತ ಹೌಸ್ ಹಿಂದುಗಡೆ ಗಾರ್ಡನ್ ರಸ್ತೆ ಕಲಬುರಗಿ |
| 26 | ಕೊಪ್ಪಳ | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಜಿಲ್ಲಾ ಸಂಪರ್ಕ ಕಛೇರಿ ಕೇರ್/ಆಫ್, ಕೊಪ್ಪಳ ಜಿಲ್ಲಾ ಸಂಪರ್ಕ ಕಛೇರಿ, ಹೊಟೆಲ್ ಸನ್ಮಾನ ಟೂರಿಸ್ಟ್ ಹೋಮ್ ಚನ್ನಬಸವೇಶ್ವರ ಸರ್ಕಲ್ ಹತ್ತಿರ ಕನಕಗಿರಿ ರಸ್ತೆ ಗಂಗಾವತಿ ಕೊಪ್ಪಳ –583227 |
| 27 | ರಾಯಚೂರ | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಜಿಲ್ಲಾ ಸಂಪರ್ಕ ಕಛೇರಿ ಕೇರ್/ಆಫ್, ರಾಯಚೂರು ಜಿಲ್ಲಾ ಸಂಪರ್ಕ ಕಛೇರಿ ಮಾನ್ವಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಶ್ರೀ ಅಪರ್ಣ ಚಿತ್ರಮಂದಿರ ಕಾಂಪ್ಲೆಕ್ಸ್, ಸಿಂಧನೂರು ರಸ್ತೆ, ಮಾನ್ವಿ. ರಾಯಚೂರು |
| 28 | ಯಾದಗಿರಿ | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಜಿಲ್ಲಾ ಸಂಪರ್ಕ ಕಛೇರಿ ಕೇರ್/ಆಫ್, ಯಾದಗಿರಿ ಜಿಲ್ಲಾ ಸಂಪರ್ಕ ಕಛೇರಿ ಶಹಾಪೂರ ಸಮೃದ್ಧಿ ಸೌಹಾರ್ದ ಸಹಕಾರಿ ನಿ., ಚಂದ್ರಶೇಖರ ಆರಬೋಳ, ಮರೆಮ್ಮ ಗುಡಿ ಹತ್ತಿರ, ದೇವಿ ನಗರ ಶಹಾಪೂರ, ಯಾದಗಿರಿ |

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

**ಶಾಸನಬದ್ಧ ಸಹಕಾರಿ ಸಂಸ್ಥೆ**

ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010
www.souharda.coop, Ph: 080-23378375-80, Email:souharda@souharda.coop

ಸಂಸ/ಆಡಳಿತ/ಸುತ್ತೋಲೆ/06/2018–19 ದಿನಾಂಕ : 30.08.2018

ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ
ಮುಖ್ಯ ಕಾರ್ಯನಿರ್ವಾಹಕರುಗಳಿಗೆ,

## ವಿಷಯ : ಸದಸ್ಯ ಸಹಕಾರಿಗಳಿಗೆ ವೆಬ್ ಆಧಾರಿತ ಕಾಮನ್ ಸಾಫ್ಟ್‌ವೇರ್ ಪೂರೈಸುವ ಕುರಿತು

* * * * *

2017ರಂದು ನಡೆದ ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ, ಸದಸ್ಯ ಸಹಕಾರಿಗಳಿಗೆ ವೆಬ್ ಆಧಾರಿತ ಕಾಮನ್ ಸಾಫ್ಟ್‌ವೇರ್ ಪೂರೈಸುವ ಕುರಿತು ಚರ್ಚಿಸಿ ನಿರ್ಣಯಿಸಲಾಗಿತ್ತು. ಸದರಿ ಸಭೆಯು ಅನುಮೋದಿಸಿದಂತೆ, ಸದಸ್ಯ ಸಹಕಾರಿಗಳಿಗೆ ಕಾಮನ್ ಸಾಫ್ಟ್‌ವೇರ್ ಒದಗಿಸುವ ಉದ್ದೇಶದಿಂದ ರಾಜ್ಯದಲ್ಲಿನ ಆಸಕ್ತ ಸಾಫ್ಟ್‌ವೇರ್ ಪೂರೈಕೆದಾರರಿಂದ ಟೆಂಡರ್ ಸಲ್ಲಿಸುವಂತೆ ಆಹ್ವಾನಿಸಿ ಪತ್ರಿಕೆಯಲ್ಲಿ ಜಾಹಿರಾತು ನೀಡಲಾಗಿತ್ತು. ಒಟ್ಟು 25 ಸಾಫ್ಟ್‌ವೇರ್ ಪೂರೈಕಾ ಸಂಸ್ಥೆಗಳು ಆಸಕ್ತಿ ತೋರಿ ಟೆಂಡರ್ ಸಲ್ಲಿಸಿದ್ದರು. ಎಲ್ಲಾ ಸಾಫ್ಟ್‌ವೇರ್ ಪೂರೈಕಾ ಸಂಸ್ಥೆಗಳ ದಾಖಲೆಗಳನ್ನು/ತಾಂತ್ರಿಕ ಅಂಶಗಳನ್ನು ತಜ್ಞರು ಪರಿಶೀಲಿಸಿ, ಅರ್ಹ 17 ಸಂಸ್ಥೆಗಳ ತಂತ್ರಜ್ಞಾನದ ಪ್ರಾಯೋಗಿಕ ಪ್ರದರ್ಶನಕ್ಕೆ ಅವಕಾಶ ಮಾಡಿಕೊಡಲಾಗಿತ್ತು. ಈ ಪ್ರಾಯೋಗಿಕ ಪ್ರದರ್ಶನಕ್ಕೆ ಸಂಯುಕ್ತ ಸಹಕಾರಿಯ ನಿರ್ದೇಶಕರು, ಅಧಿಕಾರಿಗಳು, ಬಾಹ್ಯ ತಜ್ಞರು, ಆಯ್ದ ಸನ್ನದ್ಧು ಲೆಕ್ಕಪರಿಶೋಧಕರು, ಹಾಗೂ ಈಗಾಗಲೇ ವಿವಿಧ ತಂತ್ರಜ್ಞಾನ ಉಪಯೋಗಿಸುತ್ತಿರುವ ರಾಜ್ಯದ 70ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು/ಅಧಿಕಾರಿಗಳು ಭಾಗವಹಿಸಿದ್ದರು.

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 53(7) ರನುಸಾರ ಸದಸ್ಯ ಸಹಕಾರಿಗಳ ಅಗತ್ಯದ ಮೇರೆಗೆ ಇತರೆ ಸೇವೆಗಳನ್ನು ಒದಗಿಸುವುದು ಸಂಯುಕ್ತ ಸಹಕಾರಿಯ ಪ್ರಕಾರ್ಯವಾಗಿರುತ್ತದೆ. ಅದರಂತೆ ಎಲ್ಲಾ ಸಹಕಾರಿಗಳ ಅನುಕೂಲಕ್ಕಾಗಿ ಈ ಮೇಲೆ ಹೇಳಿದ ಕ್ರಮಗಳನ್ನು ಅನುಸರಿಸಿ, ಪ್ರಾಯೋಗಿಕ ಪ್ರದರ್ಶನದ ಆಧಾರದಲ್ಲಿ, ಭಾಗವಹಿಸಿದ ಎಲ್ಲರ ಅಭಿಪ್ರಾಯ ಪಡೆದು, ಒಟ್ಟು 14 ಸಾಫ್ಟ್‌ವೇರ್ ಪೂರೈಸುವ ಸಂಸ್ಥೆಗಳನ್ನು ಗುರುತಿಸಿ, ಅವರುಗಳಿಂದ ದರಪಟ್ಟಿ ಪಡೆದು, ಇನ್ನೊಮ್ಮೆ ಚರ್ಚಿಸಿ, ಒಟ್ಟು 7 ಕಂಪನಿಗಳನ್ನು ಅಂತಿಮಗೊಳಿಸಲಾಗಿದೆ. ಅವು ಈ ಕೆಳಗಿನಂತಿವೆ.

| | Particulars | Contact Person | Phone | email id |
|---|---|---|---|---|
| 1 | C-Edge Technologies Ltd., (A TCS-SBI Enterprise) 9th Floor, A-Wing, Lodha i-think Techno Campus, Pokhran Road No.2, Off. Eastern Express Highway, Thane(West)-400607 | B B Patil | 022-67784410, 9343140112 | corporate.office @cedge.in |
| 2 | V-Soft Technologies Pvt Ltd., Block-1, 4th Floor, My Home Hub, Madhapur, Hyderabad-500081. | Sathish Hampiholi | 9880594228 | sirish.hampiholi @vsoftcorp.com |
| 3 | Megasoft Information Systems Pvt Ltd., Unit No. B604, O2 Minerva Corporate Park, Asha nagar, Off LBS Marg, Mulund(West), Mumbai-400080. | Mahadev Hatti | 022-65000900, 8123181116 | info@megasoft-info.com |
| 4 | Naive Plus SoftwareSolutions Pvt Ltd., 25/1804-A, Nandaprayag, AN Puram, Iron Bridge Post, Alaphuzza-688011 | Prasad B K Balasubrahmanya V. | 0477-2237413, 9447048945 9703320672 | naiveplus@ gmail.com |

| | | | | |
|---|---|---|---|---|
| 5 | Overdrive Infotechs Pvt Ltd., #158, KG Road, Concorde Garden City, RR Nagar, RV Post, Bangalore-560059. | Suresh S G | 080-32491753, 9341223487 | cbsoverdrive@gmail.com |
| 6 | Sidsoft Technologies Pvt Ltd., #104, 2nd Floor, 8th Cross, East Park Road, Malleswaram, Bangalore-560003. | Chidanand | 080-23566202, 9342420004 | corp@sidsoft.in |
| 7 | Fortune InfoServe India P Ltd., 221/2B, Vaccine Depot Road, Near 2nd Railway Gate, Tilakwadi, Belgaum-590006 | Praveen Bangodi | 0831-4213699, 9845744699 | info@fortunein-foserve.com |

**ಈ ಎಲ್ಲಾ ಪೂರೈಕೆದಾರರು ಒದಗಿಸುವ ತಂತ್ರಜ್ಞಾನದಲ್ಲಿ ಶೇ.80ರಷ್ಟು ಸಾಮಾನ್ಯ ಅಂಶಗಳು ಇದ್ದು, ಶೇ.20 ರಷ್ಟು ವೈವಿಧ್ಯತೆ ಇರುತ್ತದೆ. ಈ ತಂತ್ರಜ್ಞಾನದಲ್ಲಿರುವ ಸಾಮಾನ್ಯ ಅಂಶಗಳು ಈ ಕೆಳಗಿನಂತಿವೆ.**

- H.O. Daily transactions, Day Book & Subsidiaries
- Shares Accounting
- Bankers Reconciliation
- MIS Reports (Text & Graphical)
- Investment Accounting Module
- Savings Deposits
- Current Deposits
- Fixed Deposits
- Reinvestment Deposits
- Recurring Deposits
- Pigmy Deposits
- Call Deposits
- Operative Loan accounts
- Term loans
- NPA identification & provisioning
- TDS calculations
- Cash Module
- Reports periodical including Balance sheet, P&L a/cs.
- Signature and Photo scanning and retrieval
- Passbook, FD receipts, Share Certificate, Notices, Voucher printing, Interest Certificate, etc.
- Standing Instructions Execution & Related Registers and statements
- Locker Module
- Suit Filed Accounts

ಇದು ವೆಬ್ ಆಧಾರಿತ ತಂತ್ರಜ್ಞಾನವಾಗಿದ್ದು, ಸ್ಥಳೀಯವಾಗಿ ಯಾವುದೇ ತಂತ್ರಾಂಶವನ್ನು ಇನಾಸ್ಟಾಲ್ ಮಾಡುವುದಿಲ್ಲ. ಎಲ್ಲಾ ದಾಖಲೆಗಳು/ ಮಾಹಿತಿ ಸರ್ವರ್‌ನಲ್ಲಿ ಇರಲಿದ್ದು, ಸ್ಥಳೀಯವಾಗಿ ಇಂಟರ್ ನೆಟ್ ಮೂಲಕ ಸಂಪರ್ಕ ಇರಲಿದೆ. ತಂತ್ರಜ್ಞಾನ ಉಪಯೋಗಿಸಲಿಚ್ಛಿಸುವ ಪ್ರತಿ ಸಹಕಾರಿಯು ಪ್ರತಿ ಶಾಖೆಗೆ ಮಾಸಿಕ ರೂ.2,000/– ಬಾಡಿಗೆಯನ್ನು ಪೂರೈಕೆ ಕಂಪನಿಗೆ ಪಾವತಿ ಮಾಡಬೇಕಿರುತ್ತದೆ. ಯಾವುದೇ ಖರೀದಿ ವೆಚ್ಚ, ಸೇವಣೆ ಇತ್ಯಾದಿ ಯಾವುದೂ ಇರುವುದಿಲ್ಲ. ಯಾವುದೇ ಸಹಕಾರಿಯು ತಂತ್ರಜ್ಞಾನದಲ್ಲಿ ಯಾವುದೇ ಬದಲಾವಣೆ ಕೋರಿದಲ್ಲಿ ಅದಕ್ಕೆ ಪ್ರತ್ಯೇಕ ವೆಚ್ಚ ಪಾವತಿಸಬೇಕಾಗಿರುತ್ತದೆ. ಹಾಗೂ ಈಗಾಗಲೇ ತಂತ್ರಾಂಶ ಉಪಯೋಗಿಸುತ್ತಿದ್ದಲ್ಲಿ, ದತ್ತಾಂಶವನ್ನು ನೂತನ ತಂತ್ರಾಂಶದಲ್ಲಿ ಇಸ್ಟಾಲ್ ಮಾಡಲು ಪ್ರತ್ಯೇಕ ವೆಚ್ಚ ಪಾವತಿಸಬೇಕಾಗುತ್ತದೆ.

ಈ ಎಲ್ಲಾ ಅಂಶಗಳನ್ನು ಗಮನಿಸಿ, ಆಸಕ್ತ ಸಹಕಾರಿಗಳು ಮೇಲ್ಕಾಣಿಸಿದ ಯಾವುದೇ ಕಂಪನಿಯ ಜೊತೆ ಒಪ್ಪಂದ ಮಾಡಿಕೊಳ್ಳುವ ಮೂಲಕ ಈ ತಂತ್ರಾಂಶವನ್ನು ಉಪಯೋಗಿಸಿಕೊಳ್ಳಬಹುದಾಗಿದೆ. ಪೂರೈಕೆದಾರರ ಸೇವೆಯಲ್ಲಿ ಲೋಪವಾದಲ್ಲಿ ಅಥವಾ ಹೆಚ್ಚಿನ ಮೊತ್ತ ಕೇಳಿದಲ್ಲಿ ಸಂಯುಕ್ತ ಸಹಕಾರಿಯ ಗಮನಕ್ಕೆ ತರಲು ತಿಳಿಸಿದೆ.

ವಂದನೆಗಳೊಂದಿಗೆ,

ಸಹಿ/–
**ಶರಣಗೌಡ ಜಿ ಪಾಟೀಲ**
(ವ್ಯವಸ್ಥಾಪಕ ನಿರ್ದೇಶಕ)

## ಸೌಹಾರ್ದ ಸಹಕಾರಿಗಳ ಗಮನಕ್ಕೆ

## ರಾಷ್ಟ್ರೀಯ ತರಬೇತಿ ಕಾರ್ಯಕ್ರಮಗಳು

### ಪರಿಶಿಷ್ಠ ಜಾತಿ / ಪರಿಶಿಷ್ಠ ವರ್ಗದ ನಿರ್ದೇಶಕರಿಗೆ ತರಬೇತಿ

ರಾಷ್ಟ್ರೀಯ ಸಹಕಾರಿ ಶಿಕ್ಷಣ ಕೇಂದ್ರ (NCCE) ಸಂಸ್ಥೆಯಿಂದ ಎಸ್.ಸಿ/ ಎಸ್.ಟಿ ಸಹಕಾರಿ ಸಂಸ್ಥೆಗಳ ಅಧ್ಯಕ್ಷರು ಹಾಗೂ ನಿರ್ದೇಶಕರುಗಳಿಗಾಗಿ ದಿನಾಂಕ 23 ರಿಂದ 25 ಅಕ್ಟೋಬರ್ 2018 ರವರೆಗೆ "ನಾಯಕತ್ವ ಅಭಿವೃದ್ಧಿ ತರಬೇತಿ" ಯನ್ನು NCCE ನವದೆಹಲಿಯಲ್ಲಿ ಆಯೋಜಿಸಲಾಗಿದೆ. ಈ ತರಬೇತಿಯನ್ನು ಎಸ್.ಸಿ/ಎಸ್.ಟಿ ಸಹಕಾರಿ ಸಂಸ್ಥೆಗಳ ಆಡಳಿತ ಕೌಶಲ್ಯ ಅಭಿವೃದ್ಧಿಗಾಗಿ ಆಯೋಗಿಸಲಾಗಿದೆ. ತರಬೇತಿಗೆ ಹಾಜರಾಗುವವರಿಗೆ ಸ್ಲೀಪರ್ ಕ್ಲಾಸ್/ ಸಾಮಾನ್ಯ ಬಸ್ ಪ್ರಯಾಣ ವೆಚ್ಚ, NCCE ಸಂಸ್ಥೆಯ ವಸತಿ ನಿಲಯ (Hostel) ದಲ್ಲಿ ವಸತಿ ವ್ಯವಸ್ಥೆ ತರಬೇತಿ ಮತ್ತು ಅಧ್ಯಯನ ಸಾಹಿತ್ಯ ವ್ಯವಸ್ಥೆ, ಅಧ್ಯಯನ ಭೇಟಿ ಸೌಲಭ್ಯವನ್ನು ಕಲ್ಪಿಸಲಾಗುತ್ತದೆ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: ನ್ಯಾಷನಲ್ ಸೆಂಟರ್ ಫಾರ್ ಕೋ–ಅಪರೇಟಿವ್ ಎಜುಕೇಷನ್, 3, ಸಿರಿ ಇನ್‌ಸ್ಟಿಟ್ಯೂಷನಲ್ ಏರಿಯಾ, ಆಗಸ್ಟ್ ಕ್ರಾಂತಿ ಮಾರ್ಗ, ನವದೆಹಲಿ–110016. ದೂರವಾಣಿ ಸಂಖ್ಯೆ : 011–41811158, 9811503851.

### ಮಹಿಳಾ ಸಹಕಾರಿ ನಿರ್ದೇಶಕರುಗಳಿಗೆ ತರಬೇತಿ

ರಾಷ್ಟ್ರೀಯ ಸಹಕಾರಿ ಶಿಕ್ಷಣ ಕೇಂದ್ರ (NCCE) ಸಂಸ್ಥೆಯಿಂದ ಸಹಕಾರಿ ಸಂಸ್ಥೆಗಳ ಮಹಿಳಾ ಅಧ್ಯಕ್ಷರು ಹಾಗೂ ನಿರ್ದೇಶಕರುಗಳಿಗೆ ದಿನಾಂಕ 29 ರಿಂದ 31 ಅಕ್ಟೋಬರ್ 2018 ರವರೆಗೆ "ನಾಯಕತ್ವ ಅಭಿವೃದ್ಧಿ ತರಬೇತಿ" ಯನ್ನು ಓಅಅಇ ನವದೆಹಲಿ ಇಲ್ಲಿ ಆಯೋಜಿಸಲಾಗಿದೆ. ಈ ತರಬೇತಿಯನ್ನು ಸಹಕಾರಿ ಸಂಸ್ಥೆಗಳ ಮಹಿಳಾ ನಾಯಕರ ನಡುವೆ ಆಡಳಿತ ಕೌಶಲ್ಯ ಅಭಿವೃದ್ಧಿಗಾಗಿ ಆಯೋಗಿಸಲಾಗಿದೆ. ತರಬೇತಿಗೆ ಹಾಜರಾಗುವವರಿಗೆ ಸ್ಲೀಪರ್ ಕ್ಲಾಸ್/ ಸಾಮಾನ್ಯ ಬಸ್ ಪ್ರಯಾಣ ವೆಚ್ಚ, NCCE ಸಂಸ್ಥೆಯ ವಸತಿ ನಿಲಯ (Hostel) ದಲ್ಲಿ ವಸತಿ ವ್ಯವಸ್ಥೆ ತರಬೇತಿ ಮತ್ತು ಅಧ್ಯಯನ ಸಾಹಿತ್ಯ ವ್ಯವಸ್ಥೆ, ಅಧ್ಯಯನ ಭೇಟಿ ಸೌಲಭ್ಯವನ್ನು ಕಲ್ಪಿಸಲಾಗುತ್ತದೆ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: ನ್ಯಾಷನಲ್ ಸೆಂಟರ್ ಫಾರ್ ಕೋ–ಅಪರೇಟಿವ್ ಎಜುಕೇಷನ, 3, ಸಿರಿ ಇನ್‌ಸ್ಟಿಟ್ಯೂಷನಲ್ ಏರಿಯಾ, ಆಗಸ್ಟ್ ಕ್ರಾಂತಿ ಮಾರ್ಗ, ನವದೆಹಲಿ–110016. ದೂರವಾಣಿ ಸಂಖ್ಯೆ : 011–41811158, 9811503851.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಬೆಳಗಾವಿ ವಿಭಾಗದಿಂದ 3237 ಮತ್ತು ಬೆಂಗಳೂರು, ಮೈಸೂರು ಹಾಗೂ ಕಲಬುರಗಿ ವಿಭಾಗಗಳಿಂದ 2240 ಪ್ರಕರಣಗಳು ಸೇರಿದಂತೆ ಒಟ್ಟು 5477 ದಾವಾ ಪ್ರಕರಣಗಳು ದಾಖಲಾಗಿವೆ. ಇವುಗಳ ಪೈಕಿ 2746 ಪ್ರಕರಣಗಳು ಇತ್ಯರ್ಥಗೊಂಡಿವೆ.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 1125 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 72 ಪ್ರಕರಣಗಳು ಇತ್ಯರ್ಥಗೊಂಡಿದೆ. 987 ಪ್ರಕರಣಗಳು ಪ್ರಗತಿಯಲ್ಲಿದ್ದು, 66 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 742 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು, 79 ಪ್ರಕರಣಗಳು ಇತ್ಯರ್ಥಗೊಂಡಿವೆ.

## ಸಂಯುಕ್ತ ಸಹಕಾರಿಯ ಮುಂಬರುವ ತರಬೇತಿ ಕಾರ್ಯಕ್ರಮಗಳು :

- **ಕೇಂದ್ರ ಕಛೇರಿ :** ದಿನಾಂಕ 26.10.2018 ರಿಂದ 29.10.2018ರವರೆಗೆ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಿಗೆ ಆಡಳಿತ ಮಂಡಲಿ ಪರಿಣಿತಿ ತರಬೇತಿಯನ್ನು ಅಂಡಮಾನ್‌ನಲ್ಲಿ ಆಯೋಜಿಸಲಾಗಿದೆ.
- ವಿಷಯಾಧಾರಿತ ತರಬೇತಿ ಕಾರ್ಯಕ್ರಮಗಳು – ಪ್ರಾಂತೀಯ ಕಛೇರಿಗಳಿಂದ ದಿನಾಂಕಗಳನ್ನು ಸೂಚಿಸಲಾಗುವುದು.

## ಮಾನ್ಯ ಅಧ್ಯಕ್ಷರ ಹಾಗೂ ನಿರ್ದೇಶಕರಗಳು ಸೌಹಾರ್ದ ಸಹಕಾರಿಗಳ ಭೇಟಿ



ಉಡುಪಿ : ಸನ್ನಿಧಿ ಮಹಿಳಾ ಸೌಹಾರ್ದ ಸಹಕಾರಿ ನಿ., ಪಾಂಡೇಶ್ವರ ಸಹಕಾರಿ ಭೇಟಿ.



ಉಡುಪಿ : ಶ್ರೀ ರಾಮ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ. ಉಡುಪಿ ಸಹಕಾರಿ ಭೇಟಿ.




ನವದೆಹಲಿಯಲ್ಲಿ ನಡೆದ ಎನ್.ಸಿ.ಯು.ಐ ಇದರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರ ಭಾಷಣ.



**ಬೆಂಗಳೂರು** : ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳದ 2ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ಮಾನ್ಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಸದರಿ ಸಾಮಾನ್ಯ ಸಭೆಯಲ್ಲಿ ಮಾನ್ಯ ಮಾಜಿ ಸಹಕಾರ ಸಚಿವರಾದ ಶ್ರೀ ಎಸ್. ಎಸ್ ಪಾಟೀಲ, ಉಪಾಧ್ಯಕ್ಷರಾದ ಶ್ರೀ ಕೆ. ಸತೀಶ, ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ, ಸಹಕಾರಿಯ ನಿರ್ದೇಶಕರು ಹಾಗೂ ಹಿರಿಯ ಸಹಕಾರಿಗಳು ಉಪಸ್ಥಿತರಿದ್ದರು.

## ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ ಬ್ಯಾಂಕ್ ನಿಯಮಿತ ಇದರ 93ನೇ ವಾರ್ಷಿಕ ಸಾಮಾನ್ಯ ಸಭೆ





ಕರ್ನಾಟಕ ಸ್ಟೇಟ್ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟೀಸ್ ಅಸೋಸಿಯೇಷನ್ (ರಿ) ಬೆಂಗಳೂರು ಇದರ ವಾರ್ಷಿಕ ಸಾಮಾನ್ಯ ಸಭೆ

## ನೂತನ ಕಟ್ಟಡ ಉದ್ಘಾಟನಾ ಸಮಾರಂಭ



**ತಿಪಟೂರು** : ಉದಯರವಿ ಸೌಹಾರ್ದ ಪತ್ತಿನ ಸಹಕಾರಿ ನಿ., ತಿಪಟೂರು ಇದರ ನೂತನ ಕಟ್ಟಡ ಉದ್ಘಾಟನಾ ಸಮಾರಂಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಇವರನ್ನು ಸನ್ಮಾನಿಸಲಾಯಿತು.



**ಬೆಂಗಳೂರು** : ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಂಗಳೂರು ಇದರ ನೂತನ ಕಟ್ಟಡ ಉದ್ಘಾಟನಾ ಸಮಾರಂಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ.

# ಪಾವಗಡ ಸೌಹಾರ್ದ ಸಹಕಾರಿಯ ವಾರ್ಷಿಕ ಮಹಾಸಭೆಯ ಕಾರ್ಯಚಟುವಟಿಕೆಗಳು





**ಪಾವಗಡ :** ಪಾವಗಡ ಸೌಹಾರ್ದ ಸಹಕಾರಿಯ ನೂತನ ಆಡಳಿತ ಕಛೇರಿಯನ್ನು ಜಂಟಿ ನಿಬಂಧಕರಾದ ಶ್ರೀ ಬಾಲಶೇಖರ್ ಹಾಗೂ ಪಾವಗಡ ಸೌಹಾರ್ದ ಸೌಧದ ಉದ್ಘಾಟನೆಯನ್ನು ಶ್ರೀಮತಿ ಮಮತಾ ವೆಂಕಟೇಶ್, ಕಾರ್ಪೊರೇಟರ್ ರವರು ಉದ್ಘಾಟಿಸಿದರು.



ಶ್ರೀ ಜಂಟಿ ನಿಬಂಧಕರಾದ ಎಂ.ಡಿ ನರಸಿಂಹಮೂರ್ತಿ ಇವರಿಂದ ಶಾಖಾಕಟ್ಟಡಗಳ ಉದ್ಘಾಟನೆ ಹಾಗೂ ಅವರಿಗೆ ಸನ್ಮಾನ.



ನೆರೆ ಸಂತ್ರಸ್ತರ ಪರಿಹಾರ ನಿಧಿಗೆ ರೂ 1.10.000 ಕೊಡುಗೆ.

# ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದಿಂದ ಸ್ವಚ್ಛ ಭಾರತ - ಸ್ವಸ್ಥ ಭಾರತ ಕಾರ್ಯಕ್ರಮ

ದಿನಾಂಕ 02.10.2018 ಮಂಗಳವಾರ ಬೆಳ್ಳಿಗೆ 7:30 ಗಂಟೆಗೆ ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಬೀದರ ಇದರ ವತಿಯಿಂದ ನಗರದ ಪುಣ್ಯ ಕ್ಷೇತ್ರವಾದ ಶ್ರೀ ನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ರಾಷ್ಟ್ರಪಿತಾ ಮಹಾತ್ಮ ಗಾಂಧಿ ಜಯಂತಿ ನಿಮಿತ್ಯ ಸ್ವಚ್ಛ ಭಾರತ ಸ್ವಾಸ್ಥ ಭಾರತ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಈ ಸ್ವಚ್ಛತಾ ಅಭಿಯಾನ ಕಾರ್ಯಕ್ರಮವನ್ನು ನಗರ ಸಭೆಯ ಅಧ್ಯಕ್ಷರಾದ ಶ್ರೀಮತಿ ಶಾಲಿನಿ ಚಿಂತಾಮಣಿ, ಪೌರಾಯುಕ್ತರಾದ ಶ್ರೀ ಮನೋಹರ ಹಾಗೂ ಒಕ್ಕೂಟದ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ ಅವರು ಸಹಕಾರಿಗಳ ಸಮುಖದಲ್ಲಿ ಗಾಂಧಿ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಕಸ ಗುಡಿಸುವ ಮೂಲಕ ಸ್ವಚ್ಛತೆಗೆ ಚಾಲನೆ ನೀಡಿದರು.

ಸ್ವಚ್ಛತೆಗೆ ಚಾಲನೆ ನೀಡುವ ಮುನ್ನ ಸಹಕಾರಿಗಳಿಗೆ ಪ್ರತಿನಿತ್ಯವು ಸ್ವಚ್ಛತೆಗೆ ಪ್ರಾಮುಖ್ಯತೆ ನೀಡುವುದಾಗಿ ಎಂದು ಒಕ್ಕೂಟ ನಿರ್ದೇಶಕರಾದ ಡಾ ಅಶೋಕ ನಾಗೂರೆ ಇವರು ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು. ನಿರ್ದೇಶಕರಾದ ಶ್ರೀ ಜಗನಾಥ ಕರಂಜೆ ಇವರು ಮಾತನಾಡಿ ಸ್ವಚ್ಛತೆಯು ಸ್ವಸ್ಥತೆಗೆ ಕಾರಣವಾಗಿದೆ. ಆದುದರಿಂದ ಪ್ರತಿಯೊಬ್ಬರು ಸ್ವಚ್ಛತೆಯ ಬಗ್ಗೆ ಕಾಳಜಿವಹಿಸಿದಲ್ಲಿ ಪರಿಸರ ಮಾಲಿನ್ಯ ತಡೆಯುವ ಮೂಲಕ ಸ್ವಸ್ಥ ಸಮಾಜ ನಿರ್ಮಾಣ ಮಾಡಬಹುದು ಎಂದು ನುಡಿದರು. ಅಧ್ಯಕ್ಷತೆ ವಹಿಸಿದ ಗುರುನಾಥ ಜಾಂತಿಕರ ಮಾತನಾಡಿ ಕೇವಲ ಜಯಂತಿ ನಿಮಿತ್ಯ ಸ್ವಚ್ಛತೆ ನಡೆಸದೆ ಪ್ರತಿದಿನವು ಈ ಕಾರ್ಯ ಕೈಗೊಳ್ಳುವ ಅಗತ್ಯವಿದೆ, ಆದರಿಂದ ಸೌಹಾರ್ದ ಸಹಕಾರಿಗಳು ಪ್ರತಿತಿಂಗಳ ಎರಡನೆ ರವಿವಾರ



ನಗರದ ವಿವಿಧ ಸ್ಥಳಗಲ್ಲಿ ಸ್ವಚ್ಛತೆಯ ಅಭಿಯಾನ ನಡೆಸಲಾಗುವುದು ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ನರಸಿಂಹ ಝರಣೆಯ ಮುಖ್ಯದ್ವಾರದಿಂದ ಮುಖ್ಯ ರಸ್ತೆಯವರೆಗೆ ಕಸಕಡ್ಡಿ ಗುಡಿಸಿ ಜಾಡಿಗಳನ್ನು ಕಡಿದು ಸ್ವಚ್ಛತೆ ಮಾಡಲಾಯಿತ್ತು. ಈ ಕಾರ್ಯಕ್ಕೆ ನಗರಸಭೆಯ ಸಿಬ್ಬಂದಿಗಳಾದ ಪೌರ ಕಾರ್ಮಿಕರು ಸ್ವಾಗತ ನೀಡಿದರು. ಈ ಸ್ವಚ್ಛತೆಯ ಕಾರ್ಯದಲ್ಲಿ ಒಕ್ಕೂಟದ ನಿರ್ದೇಶಕರಾದ ಶ್ರೀ ರಾಜಶೇಖರ ನಾಗಮೂರ್ತಿ, ಶಿವಬಸಪ್ಪ ಚನ್ನಮಲ್ಲೆ. ಸಂಜಯ ಕ್ಯಾಸಾ, ಬಸವರಾಜ ಬುದೆರಾ, ಉಪಾಧ್ಯಕ್ಷರಾದ ಶ್ರೀ ಸಂಜಯಕುಮಾರ ಪಾಟೀಲ ಕ್ರಾಂತಿಕುಮಾರ ಕುಲಾಲ, ಹಿರಿಯ ಸಾಹಿತಿ ಮಾನಶಟ್ಟಿ ಬೆಳಕೆರೆ ಹಿರಿಯ ಸಹಕಾರಿಗಳಾದ ಶ್ರೀ ಕೃಷ್ಣಮೂರ್ತಿ ನಂದಾ ಮಲ್ಲಿಕಾರ್ಜುನ ನೌಬಾದೆ ಒಕ್ಕೂಟದ ಕಾರ್ಯದರ್ಶಿ ಅಮೃತ ಹೊಸಮನಿ ಸೌಹಾರ್ದ ಅಭಿವೃದ್ಧಿ ಅಧಿಕಾರಿ ವೀರಶಟ್ಟಿ ಭಾಗವಹಿಸಿದರು. ಸಂಜೀವಕುಮಾರ ಪಾಟೀಲ ನಿರೂಪಿಸಿದರೆ, ಶ್ರೀಕಾಂತ ಸ್ವಾಮಿ ಸೋಲಪೂರ ವಂದಿಸಿದರು.

### ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಜೀವನ ಸಬಲೀಕರಣ ಕಾರ್ಯಕ್ರಮ

# ಸಕಾರಾತ್ಮ ಚಿಂತನೆಗಳು ಸಕಾರಾತ್ಮಕ ಫಲಿತಾಂಶಗಳನ್ನು ನೀಡುತ್ತವೆ : ಶ್ರೀ ಹರೀಶ್ ಆರ್

ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ ಪುತ್ತೂರು ಇದರ ಸಹಸಂಸ್ಥೆ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಜೀವನ ಸಬಲೀಕರಣ ಎಂಬ ವಿಷಯದ ಕುರಿತು ಒಂದು ದಿನದ ತರಬೇತಿ ಕಾರ್ಯಕ್ರಮವು ದಿನಾಂಕ 27-09-2018ರಂದ್ಲು ನಡೆಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ನಿರ್ದೇಶಕರಾದ ಶ್ರೀ ಹರೀಶ್ ಬೋರ್ಕರ್ ರವರು ನೆರವೇರಿಸಿದ್ದರು

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಪ್ರಧಾನ ವ್ಯವಸ್ಥಾಪಕರಾದ ಶ್ರೀ ವಸಂತ್ ಎ ಇವರು ವಹಿಸಿ ಜೀವನ ಸಬಲೀಕರಣದಂತಹ ಕಾರ್ಯಕ್ರಮಗಳು ವ್ಯಕ್ತಿಯ ಬದುಕನ್ನು ಹಸನು ಮಾಡುವಲ್ಲಿ ಮಹತ್ತರ ಪಾತ್ರವನ್ನು ನಿರ್ವಹಿಸುವುದರೊಂದಿಗೆ ಸದೃಢ ಸಮಾಜ ನಿರ್ಮಾಣ ಮಾಡುವಲ್ಲಿ ಪ್ರೇರಣಾದಾಯಿಯಾಗಿದೆ ಎಂದರು ಹಾಗೂ ಭಾಗವಹಿಸಿದ ವಿವಿಧ ಸಂಸ್ಥೆಗಳ ಸಿಬ್ಬಂದಿಗಳು ಕಾರ್ಯಕ್ರಮದ ಸಂಪೂರ್ಣ ಸದುಪಯೋಗಪಡೆದುಕೊಳ್ಳಬೇಕೆಂದು ಹೇಳಿದರು.

ಅಂತರಾಷ್ಟ್ರೀಯ ತರಬೇತುದಾರರಾದ ಮ್ಯಾನೇಜ್‌ಮೆಂಟ್ ಗುರು ಶ್ರೀ ಹರೀಶ್ ಆರ್ 'ಜೀವನ ಸಬಲೀಕರಣ" ವಿಷಯದ ಕುರಿತು ತರಬೇತಿ ಕಾರ್ಯಕ್ರಮವನ್ನು ನಡೆಸಿಕೊಟ್ಟರು.




ಕಾರ್ಯಕ್ರಮದಲ್ಲಿ ಕ್ಯಾಂಪ್ಕೋ ಸಂಸ್ಥೆಯ ಸಿಬ್ಬಂದಿಗಳು, ಮಾಸ್ಟರ್ ಪ್ಲಾನೆರಿ ಸಂಸ್ಥೆಯ ಸಿಬ್ಬಂದಿಗಳು, ವೆಲ್ತ್ ವಿಶನ್ ಮತ್ತು ಹಾರ್ದಿಕ್ ಹರ್ಬಲ್ಸ್‌ನ ಸಿಬ್ಬಂದಿಗಳು, ವಿವೇಕಾನಂದ ಇಂಜಿನಿಯರಿಂಗ್ ಕಾಲೇಜಿನ ವಿವಿಧ ವಿಭಾಗದ ವಿದ್ಯಾರ್ಥಿಗಳು ಮತ್ತಿತರರು ಭಾಗವಹಿಸಿದ್ದರು.



ಕೌಸ್ತುಭ ವಿವಿದೋದ್ದೇಶ ಸೌಹಾರ್ದ ಸಹಕಾರಿಯ 5ನೇ ಸಾಮಾನ್ಯ ಸಭೆ – ಮೈಸೂರು



ಶ್ರೀ ಪುಟ್ಟರಾಜ ಗವಾಯಿ-ಸಚೇತನ ವಿವಿದ್ದೋದ್ದೇಶ ಸೌಹಾರ್ದ ಸಹಕಾರಿಯ 7ನೇ ವಾರ್ಷಿಕ ಸಾಮಾನ್ಯ ಸಭೆ-ಹಾವೇರಿ



**ಉಡುಪಿ :** ಗಂಗೊಳ್ಳಿ ಟೌನ್ ಸೌಹಾರ್ದ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕ ಮತ್ತು ನಿರ್ದೇಶಕರುಗಳು ಒಡಿಯೂರು ಸೌಹಾರ್ದ ಸಹಕಾರಿಯ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರನ್ನು ಭೇಟಿ ಮಾಡಿ ಸ್ವ-ಸಹಾಯ ಗುಂಪುಗಳಿಗೆ ಸಾಲ ನೀಡುವ ಯೋಜನೆ ಕುರಿತು ಮಾಹಿತಿ ಪಡೆದರು.

## ಇ-ಸ್ಟಾಂಪಿಂಗ್ ಉದ್ಘಾಟನೆ



**ಶಿರಸಿ :** ದಿನಾಂಕ 16.09.2018ರಂದು ಶ್ರೀ ನಾಗಲಿಂಗೇಶ್ವರ ಸೌಹಾರ್ದ ವಿವಿದೋದ್ದೇಶ ಸಹಕಾರಿ ನಿ., ಶಿರಸಿ ಇದರ ಇ-ಸ್ಟಾಂಪಿಂಗ್ ಉದ್ಘಾಟನೆಯನ್ನು ಶಿರಸಿ ನಗರಸಭಾ ಮಾಜಿ ಅಧ್ಯಕ್ಷರಾದ ಶ್ರೀ ಪ್ರದೀಪ ಶೆಟ್ಟಿ ಇವರು ನೆರವೆರಿಸಿದರು.

## ಶ್ರೀ ಸರಸ್ವತಿ ಪತ್ತಿನ ಸೌಹಾರ್ದ ಸಹಕಾರಿಗೆ "ಸಾಧನಾ ಪ್ರಶಸ್ತಿ"

**ಪುತ್ತೂರು :** ಸಹಕಾರಿ ಕ್ಷೇತ್ರದಲ್ಲಿ ಸರ್ವತೋಮುಖ ಪ್ರಗತಿಯನ್ನು ಸಾಧಿಸಿದ ರಾಜ್ಯದ ಪ್ರತಿಷ್ಠಿತ ಸಹಕಾರಿ ಸಂಸ್ಥೆ ಶ್ರೀ ಸರಸ್ವತಿ ಕ್ರಡಿಟ್ ಸೌಹಾರ್ದ ಸಹಕಾರಿಗೆ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ. ಮಂಗಳೂರು ಇದರ ವತಿಯಿಂದ ದಕ್ಷಿಣ ಕನ್ನಡ ಜಿಲ್ಲಾ "ಸಾಧನಾ ಪ್ರಶಸ್ತಿ"ಯನ್ನು ಬ್ಯಾಂಕ್‌ನ ವಾರ್ಷಿಕ ಮಹಾಸಭೆಯಂದು ಡಿಸಿಸಿ ಬ್ಯಾಂಕ್ ಅಧ್ಯಕ್ಷರಾದ ಡಾ। ಎಂ.ಎನ್. ರಾಜೇಂದ್ರ ಕುಮಾರ್‌ರವರು ಪ್ರಧಾನಮಾಡಿದರು.



ಪುತ್ತೂರಿನ ದರ್ಬೆಯಲ್ಲಿ ಪ್ರಧಾನ ಕಛೇರಿಯನ್ನು ಹೊಂದಿ 17 ವರ್ಷಗಳಿಂದ ಸಹಕಾರಿ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಸಹಕಾರಿಯು ರಾಜ್ಯವ್ಯಾಪಿ ಕಾರ್ಯವ್ಯಾಪ್ತಿಯನ್ನು ಹೊಂದಿ ರಾಜ್ಯದ ರಾಜಧಾನಿಯಲ್ಲಿ 4 ಶಾಖೆಗಳೂ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ 17 ಶಾಖೆಗಳನ್ನು ಹೊಂದಿ ಕಾರ್ಯಾಚರಿಸುತ್ತಿದೆ. ಸಹಕಾರಿ ತತ್ವಗಳೊಂದಿಗೆ ಸದಸ್ಯರಿಗೆ ಸೇವೆಯನ್ನು ಸಲ್ಲಿಸುತ್ತಿರುವ ಸಹಕಾರಿಯು ತನ್ನ ಸೇವಾ ಕಾರ್ಯಗಳ ಮೂರ್ತ ರೂಪವಾಗಿ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ ಎಂಬ ಸಹಸಂಸ್ಥೆಯನ್ನು ಸ್ಥಾಪಿಸಿ ತನ್ನ ಸಾಮಾಜಿಕ ಬದ್ಧತೆಯಲ್ಲಿಯೂ ಮಾದರಿಯಾಗಿ ವಿವಿಧ ಸಮಾಜೋಪಯೋಗಿ ಸೇವಾಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ. ಸಹಕಾರಿಯು 2017–18 ಆರ್ಥಿಕ ವರ್ಷದಲ್ಲಿ 3.04 ಕೋಟಿ ಲಾಭಗಳಿಸಿ, ಪ್ರಸ್ತುತ 164 ಕೋಟಿ ಠೇವಣಿ ಸಂಗ್ರಹಿಸಿ 122ಕೋಟಿ ಸಾಲ ವಿತರಿಸಿದ್ದು ಯಶಸ್ವಿಯಾಗಿ ಮುನ್ನಡೆಯುತ್ತಿದೆ.

ಸಹಕಾರಿಯ ಈ ಸರ್ವತೋಮುಖ ಪ್ರಗತಿಯನ್ನು ಗಮನಿಸಿ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ವತಿಯಿಂದ ನೀಡಿದ "ಸಾಧನಾ ಪ್ರಶಸ್ತಿ"ಯನ್ನು ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಪ್ರಧಾನ ವ್ಯವಸ್ಥಾಪಕರಾದ ಶ್ರೀ ವಸಂತ್ ಎ ಮತ್ತು ಸಹಕಾರಿಯ ನಿರ್ದೇಶಕರಾದ ಶ್ರೀ ಪದ್ಮನಾಭ ಬೋರ್ಕರ್ ಇವರು ಸ್ವೀಕರಿಸಿದರು.

## ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ 7ನೇ ವಾರ್ಷಿಕ ಸಾಮಾನ್ಯ ಸಭೆ - ಬೀದರ



**ಬೀದರ :** ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ಇದರ 7ನೇ ವರ್ಷದ ಸಾಮಾನ್ಯ ಸಭೆಯನ್ನು ದಿನಾಂಕ : 16.09.2018ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಇದರ ನಿರ್ದೇಶಕರಾದ ಹಾಗೂ ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ ಇವರ ಅಧ್ಯಕ್ಷತೆಯಲ್ಲಿ ನಡೆಯಿತು.

## ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ವಾರ್ಷಿಕ ಸಾಮಾನ್ಯ ಸಭೆ - ಉಡುಪಿ



**ಉಡುಪಿ :** ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ಇದರ ಸಾಮಾನ್ಯ ಸಭೆಯನ್ನು ದಿನಾಂಕ : 22.09.2018ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಇದರ ನಿರ್ದೇಶಕರಾದ ಹಾಗೂ ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಮಂಜುನಾಥ ಇವರ ಅಧ್ಯಕ್ಷತೆಯಲ್ಲಿ ನಡೆಯಿತು.

## ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿಯ 18ನೇ ವಾರ್ಷಿಕ ಸಾಮಾನ್ಯ ಸಭೆ – ಬೀದರ



**ಬೀದರ :** ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿಯ 18ನೇ ವರ್ಷದ ಸಾಮಾನ್ಯ ಸಭೆಯನ್ನು ದಿನಾಂಕ : 16.09.2018ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಇದರ ನಿರ್ದೇಶಕರಾದ ಹಾಗೂ ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಗುರುನಾಥ ಜಾಂತಿಕರ ಇವರ ಅಧ್ಯಕ್ಷತೆಯಲ್ಲಿ ನಡೆಯಿತು.

## ತುಮಕೂರು ಜಿಲ್ಲಾ ಗುತ್ತಿಗೆದಾರರ ವಿವಿದೋದ್ದೇಶ ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ - ತುಮಕೂರು



**ತುಮಕೂರು :** ತುಮಕೂರು ಜಿಲ್ಲಾ ಗುತ್ತಿಗೆದಾರರ ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಇದರ ಅಧಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ ಹಾಗೂ ನಿರ್ದೇಶಕರಾದ ಶ್ರೀ ಗಂಗಾಧರಯ್ಯ ರವರು ಉಪಸ್ಥಿತರಿದ್ದರು.

## ಸ್ಕೊಡ್ ವೆಸ್ ಮಹಿಳಾ ಸೌಹಾರ್ದ ಸಹಕಾರಿಯ 3ನೇ ವಾರ್ಷಿಕ ಸಾಮಾನ್ಯ ಸಭೆ – ಶಿರಸಿ

**ಶಿರಸಿ :** ಸ್ಕೊಡ್‌ವೆಸ್ ಮಹಿಳಾ ಸೌಹಾರ್ದ ಸಹಕಾರಿಯ ತೃತೀಯ ವರ್ಷದ ಸಾಮಾನ್ಯ ಸಭೆಯನ್ನು ದಿನಾಂಕ 30.08.2018 ರಂದು ಶಿರಸಿಯ ಟಿ.ಎಮ್.ಎಸ್ ಸಭಾಭವನದಲ್ಲಿ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಇದರ ನಿರ್ದೇಶಕರಾದ ಹಾಗೂ ಸ್ಕೊಡ್‌ವೆಸ್ ಮಹಿಳಾ ಸೌಹಾರ್ದ ಸಹಕಾರಿಯ ಅಧ್ಯಕ್ಷರು ಆದ ಸರಸ್ವತಿ ಎನ್ ರವಿ ವಹಿಸಿದ್ದರು.





## ಪ್ರಗತಿ ಕೃಷ್ಣ ಸೌಹಾರ್ದ ಸಹಕಾರಿಯ 2ನೇ ವಾರ್ಷಿಕ ಸಾಮಾನ್ಯ ಸಭೆ – ಹೊಸಪೇಟೆ

**ಹೊಸಪೇಟೆ :** ಪ್ರಗತಿ ಕೃಷ್ಣ ಸೌಹಾರ್ದ ಸಹಕಾರಿಯ ಎರಡನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ 19.09.2018ರಂದು ಸಹಕಾರಿಯ ಆವರಣದಲ್ಲಿ ನಡೆಯಿತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಇದರ ನಿರ್ದೇಶಕರಾದ ಶ್ರೀ ವಿಶ್ವನಾಥ ಚ. ಹಿರೇಮಠ ಇವರು ವಹಿಸಿದರು.

## ಆದಿಶಕ್ತಿ ಸೌಹಾರ್ದ ಸಹಕಾರಿಯ 16ನೇ ವಾರ್ಷಿಕ ಸಾಮಾನ್ಯ ಸಭೆ - ಹಾನಗಲ್ಲ

**ಹಾನಗಲ್ಲ :** ದಿನಾಂಕ : 20.09.2018 ಆದಿಶಕ್ತಿ ಸೌಹಾರ್ದ ಸಹಕಾರಿಯ 16ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಇದರ ನಿರ್ದೇಶಕರಾದ ಶ್ರೀ ಮಾರುತಿ ಬಿ. ಕಲಾಲ.




## ಮೀನು ಮಾರಾಟಗಾರರ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ 8ನೇ ವಾರ್ಷಿಕ ಸಾಮಾನ್ಯ ಸಭೆ - ಉಡುಪಿ





**ಉಡುಪಿ :** ಮೀನು ಮಾರಾಟಗಾರ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ 8ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ಸಹಕಾರಿಯ ಅಧ್ಯಕ್ಷರಾದ ಬೇಬಿ ಎಚ್.ಸಾಲ್ಯಾನ್ ಅಧ್ಯಕ್ಷತೆಯಲ್ಲಿ ನಡೆಯಿತು. ಕಾರ್ಯಕ್ರಮದ ಮುಖ್ಯಅತಿಥಿಗಳಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಇದರ ನಿರ್ದೇಶಕರಾದ ಶ್ರೀ ಮಂಜುನಾಥ ಇವರು ವಹಿಸಿದರು.

## ಸರಸ್ವತಿ ಪತ್ತಿನ ಸೌಹಾರ್ದ ಸಹಕಾರಿಯ 17ನೇ ವಾರ್ಷಿಕ ಸಾಮಾನ್ಯ ಸಭೆ - ಪುತ್ತೂರು

**ಪುತ್ತೂರು :** ಸರಸ್ವತಿ ಪತ್ತಿನ ಸೌಹಾರ್ದ ಸಹಕಾರಿಯ 17ನೇ ವರ್ಷದ ಸಾಮಾನ್ಯ ಸಭೆಯನ್ನು ದಿನಾಂಕ 16.09.2018 ರಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್ಚಂದ್ರರವರ ಅಧ್ಯಕ್ಷತೆಯಲ್ಲಿ ಒಕ್ಕಲಿಗ ಗೌಡ ಸಮುದಾಯ ಭವನದಲ್ಲಿ ನಡೆಯಿತು. ಸಹಕಾರಿಯು ಒಟ್ಟು 6.59 ಕೋಟಿ ಪಾಲು ಬಂಡವಾಳ ಹೊಂದಿದ್ದು, 161 ಕೋಟಿ ಠೇವಣಿ ಸಂಗ್ರಹಿಸಿ, 111 ಕೋಟಿ ಸಾಲ ವಿತರಿಸಿದೆ ಹಾಗೂ 27,192 ಸದಸ್ಯರನ್ನು ಹೊಂದಿದೆ ಎಂದು ತಿಳಿಸಿದರು. ಅಂತೆಯೇ ಸಾಮಾಜಿಕ ಕಳಕಳಿಯ ಭಾಗವಾಗಿ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್‌ನ ಮುಖಾಂತರ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು. ಆರ್ಥಿಕ ವರ್ಷಾಂತ್ಯಕ್ಕೆ 3.04 ಕೋಟಿ ನಿವ್ವಳ ಲಾಭಗಳಿಸಿದ್ದು, ಸದಸ್ಯರಿಗೆ ಶೇ.13 ಡಿವಿಡೆಂಡ್ ನೀಡುವುದಾಗಿ ಮಹಾಸಭೆಯು ಈ ಸಂದರ್ಭದಲ್ಲಿ ನಿರ್ಧರಿಸಿತು.






ಶ್ರೀ ವಿಷ್ಣು ವಿಲಾಸ ಪತ್ತಿನ ಸೌಹಾರ್ದ ಸಹಕಾರಿಯ 7ನೇ ವಾರ್ಷಿಕ ಸಾಮಾನ್ಯ ಸಭೆ



ಓಂ ಶ್ರೀ ವೀರಭದ್ರೇಶ್ವರ ಸೌಹಾರ್ದ ಪತ್ತಿನ ಸಹಕಾರಿಯ 6ನೇ ವಾರ್ಷಿಕ ಸಾಮಾನ್ಯ ಸಭೆ – ಕಲಬುರಗಿ



ಸೌಂದರ್ಯ ಓಂ ಸಾಯಿ ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ – ಮಂಗಳೂರು



ವಿಜಿಯಸ್ ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ – ಮಂಗಳೂರು



ಗಾಯತ್ರಿ ವಿವಿದ್ದೋದ್ದೇಶ ಸೌಹಾರ್ದ ಸಹಕಾರಿಯ 19ನೇ ವಾರ್ಷಿಕ ಸಾಮಾನ್ಯ ಸಭೆ – ಕೊಪ್ಪಳ



ನಿರ್ಮಾಣ್ ವಿವಿಧೊದ್ದೇಶ ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ – ಉಡುಪಿ



ಸಿರಿ ಸೌಹಾರ್ದ ಪತ್ತಿನ ಸಹಕಾರಿಯ 17ನೇ ವಾರ್ಷಿಕ ಸಾಮಾನ್ಯ ಸಭೆ – ಶಿವಮೊಗ್ಗ



ಶ್ರೀ ಪದ್ಮ ಸೌಹಾರ್ದ ಪತ್ತಿನ ಸಹಕಾರಿಯ 3ನೇ ವಾರ್ಷಿಕ ಸಾಮಾನ್ಯ ಸಭೆ – ಬೆಂಗಳೂರು



ಶ್ರೀ ವಾಗ್ದೇವಿ ಸೌಹಾರ್ದ ಪತ್ತಿನ ಸಹಕಾರಿಯ 17ನೇ ವಾರ್ಷಿಕ ಸಾಮಾನ್ಯ ಸಭೆ – ಮೈಸೂರು



ನೀಲಾಂಬಿಕ ಸೌಹಾರ್ದ ಸಹಕಾರಿಯ 3ನೇ ವಾರ್ಷಿಕ ಸಾಮಾನ್ಯ ಸಭೆ – ಸಿಂಧನೂರು



ಶ್ರೀ ಅಕ್ಷಯ ಪತ್ತಿನ ಸೌಹಾರ್ದ ಸಹಕಾರಿಯ
8ನೇ ವಾರ್ಷಿಕ ಸಾಮಾನ್ಯ ಸಭೆ – ಬೆಂಗಳೂರು



ಶ್ರೀ ಕೂಡಲ ಸಂಗಮ ವಿವಿದೋದ್ದೇಶ ಸೌಹಾರ್ದ ಸಹಕಾರಿಯ
5ನೇ ವಾರ್ಷಿಕ ಸಾಮಾನ್ಯ ಸಭೆ – ನೆಲಮಂಗಲ



ಮಂಗಳೂರು ಸೌಹಾರ್ದ ಸಹಕಾರಿ
8ನೇ ವಾರ್ಷಿಕ ಸಾಮಾನ್ಯ ಸಭೆ – ಮಂಗಳೂರು



ಶ್ರೀ ರಾಮಾಂಜನೇಯ ಸೌಹಾರ್ದ ಸಹಕಾರಿಯ
5ನೇ ವಾರ್ಷಿಕ ಸಾಮಾನ್ಯ ಸಭೆ – ಕೋಡಿ ಕನ್ಯಾಣ



ಶ್ರೀ ಸಾಯಿ ಚನ್ನಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿಯ
8ನೇ ವಾರ್ಷಿಕ ಸಾಮಾನ್ಯ ಸಭೆ – ಸಿಂಧನೂರು



ಅಮೃತ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ
10ನೇ ವಾರ್ಷಿಕ ಸಾಮಾನ್ಯ ಸಭೆ – ಶಿವಮೊಗ್ಗ



ಶುಕಮುರಿ ಪತ್ತಿನ ಸೌಹಾರ್ದ ಸಹಕಾರಿಯ
3ನೇ ವಾರ್ಷಿಕ ಸಾಮಾನ್ಯ ಸಭೆ – ಕೊಪ್ಪಳ



ಬಾಂಧವ್ಯ ಸೌಹಾರ್ದ ಪತ್ತಿನ ಸಹಕಾರಿಯ
6ನೇ ವಾರ್ಷಿಕ ಸಾಮಾನ್ಯ ಸಭೆ – ಬೆಂಗಳೂರು



ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ 13ನೇ ವಾರ್ಷಿಕ ಸಾಮಾನ್ಯ ಸಭೆ – ಶಿವಮೊಗ್ಗ



ಭಾರತ ಪತ್ತಿನ ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ – ಬೀದರ




ವಿಶ್ವಚೇತನ ಸೌಹಾರ್ದ ಸಹಕಾರಿಯ 2ನೇ ವಾರ್ಷಿಕ ಸಾಮಾನ್ಯ ಸಭೆ – ಹಿರಿಯೂರು



ಗುರು ಮಾತೆಯರ ಮಹಿಳಾ ಸೌಹಾರ್ದ ಸಹಕಾರಿಯ 3ನೇ ವಾರ್ಷಿಕ ಸಾಮಾನ್ಯ ಸಭೆ – ವಿಜಯಪುರ



ಸಮಾನ ಪತ್ತಿನ ಸೌಹಾರ್ದ ಸಹಕಾರಿಯ 5ನೇ ವಾರ್ಷಿಕ ಸಾಮಾನ್ಯ ಸಭೆ – ಚಿಕ್ಕಮಂಗಳೂರು



ಶ್ರೀ ಶುಭಧನಲಕ್ಷ್ಮೀ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ 6ನೇ ವಾರ್ಷಿಕ ಸಾಮಾನ್ಯ ಸಭೆ– ಹೊಸಪೇಟೆ



ವಿಶ್ವಬೆಳಕು ಸೌಹಾರ್ದ ಸಹಕಾರಿಯ 3ನೇ ವಾರ್ಷಿಕ ಸಾಮಾನ್ಯ ಸಭೆ – ಮಂಗಳೂರು




ನವಕರ್ನಾಟಕ ಸೌಹಾರ್ದ ಸಹಕಾರಿಯ 16ನೇ ವಾರ್ಷಿಕ ಸಾಮಾನ್ಯ ಸಭೆ – ಹೊಸಪೇಟೆ



ಸನ್‌ರೈಸ್ ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ – ತುಮಕೂರು



ಸಿರಿ ಸೌಹಾರ್ದ ಪತ್ತಿನ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ – ಶಿವಮೊಗ್ಗ



ವಾತ್ಸಲ್ಯ ರೈತ ಮಹಿಳಾ ಸೌಹಾರ್ದ ಸಹಕಾರಿಯ
ವಾರ್ಷಿಕ ಸಾಮಾನ್ಯ ಸಭೆ – ಹೊಸೂರು



ಹರಿಹರ ಮರ್ಚಂಟ್ಸ್ ಸೌಹಾರ್ದ ಸಹಕಾರಿಯ
4ನೇ ವಾರ್ಷಿಕ ಸಾಮಾನ್ಯ ಸಭೆ – ಹರಿಹರ



ಶ್ರೀ ವೀರಭದ್ರ ಸೌಹಾರ್ದ ಪತ್ತಿನ ಸಹಕಾರಿಯ
6ನೇ ವಾರ್ಷಿಕ ಸಾಮಾನ್ಯ ಸಭೆ – ಉಡುಪಿ



ಶ್ರೀ ಪಂಚಶಕ್ತಿ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ
4ನೇ ವಾರ್ಷಿಕ ಸಾಮಾನ್ಯ ಸಭೆ –ಮೂಡುಬಿದಿರೆ



ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್
ವಾರ್ಷಿಕ ಸಾಮಾನ್ಯ ಸಭೆ – ಹೊಸದುರ್ಗ



ಶಾರದ ವಿವಿದೋದ್ದೇಶ ಸೌಹಾರ್ದ ಸಹಕಾರಿಯ
13ನೇ ವಾರ್ಷಿಕ ಸಾಮಾನ್ಯ ಸಭೆ – ಶಿವಮೊಗ್ಗ



ವಿಪ್ರ ಪತ್ತಿನ ಸೌಹಾರ್ದ ಸಹಕಾರಿಯ 10ನೇ ವಾರ್ಷಿಕ ಸಾಮಾನ್ಯ ಸಭೆ – ಧಾರವಾಡ



ಜನಹಿತ ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ – ಉಡುಪಿ



ವಿಶ್ವಗುರು ಬಸವಣ್ಣ ಸೌಹಾರ್ದ ಪತ್ತಿನ ಸಹಕಾರಿಯ
3ನೇ ವಾರ್ಷಿಕ ಸಾಮಾನ್ಯ ಸಭೆ – ಬೆಂಗಳೂರು



ದೇವನಾಂಪ್ರಿಯ ಪತ್ತಿನ ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ – ಮಸ್ಕಿ



ಅಹನಾ ಪತ್ತಿನ ಸೌಹಾರ್ದ ಸಹಕಾರಿಯ 5ನೇ ವಾರ್ಷಿಕ ಸಾಮಾನ್ಯ ಸಭೆ – ಹೊಸಪೇಟೆ



ಸನ್ಮತಿ ಸೌಹಾರ್ದ ಸಹಕಾರಿಯ 18ನೇ ವಾರ್ಷಿಕ ಸಾಮಾನ್ಯ ಸಭೆ – ದಾವಣಗೆರೆ

## ಶ್ರೀ ಮಂಜುಜ್ಯೋತಿ ಪತ್ತಿನ ಸೌಹಾರ್ದ ಸಹಕಾರಿಯ 1ನೇ ವಾರ್ಷಿಕ ಸಾಮಾನ್ಯ ಸಭೆ – ಕೊಪ್ಪಳ

ಕೊಪ್ಪಳ : ದಿನಾಂಕ 15.09.2018ರಂದು ಶ್ರೀ ಮಂಜುಜ್ಯೋತಿ ಪತ್ತಿನ ಸೌಹಾರ್ದ ಸಹಕಾರಿ ನಿ., ಕೊಪ್ಪಳ ಸಹಕಾರಿಯ ಪ್ರಥಮ ವರ್ಷದ ವಾರ್ಷಿಕೊತ್ಸವವನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಚಂದ್ರಶೇಖರಯ್ಯ ಹಿರೇಮಠ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯಲ್ಲಿ ಕುಷ್ಟಗಿ ತಾಲೂಕಿನ ಮದ್ದಾನೇಶ್ವರ ಮಠದ ಶ್ರೀಗಳಾದ ಶ್ರೀ ಕರಿಬಸನ ಶಿವಾಚಾರ್ಯರರು, ಜನಪ್ರಿಯ ಮಾಜಿ ಶಾಸಕರಾದ ಶ್ರೀ ದೊಡ್ಡನಗೌಡ ಊ ಪಾಟೀಲ್, ಹಾಗೂ ಶ್ರೀ ವಿಶ್ವನಾಥ್ ಹಿರಿಗೌಡರ್ ರವರು ಉಪಸ್ಥಿತರಿದ್ದರು.

## ಕಾಮನ್ ಸಾಫ್ಟ್‌ವೇರ್ ಪಟ್ಟಿಯಿಂದ ಕೈಬಿಟ್ಟಿರುವುದು

ಕಾಮನ್ ಸಾಫ್ಟ್‌ವೇರ್ ಯೋಜನೆಯಿಂದ ಆಟೋಮೇಷನ್ ಸಾಫ್ಟ್‌ವೇರ್ ಇವರು ಹಿಂದೆ ಸರಿದಿದ್ದು, ಸಂಯುಕ್ತ ಸಹಕಾರಿಯ ಜುಲೈ 2018ರ ಸ್ವಾಭಿಮಾನಿ ಪತ್ರಿಕೆಯಲ್ಲಿ ಪ್ರಕಟಿಸಿದ ಕಾಮನ್ ಸಾಫ್ಟ್‌ವೇರ್ ಪಟ್ಟಿಯಿಂದ ಆಟೋಮೇಷನ್ ಸಾಫ್ಟ್‌ವೇರ್ ಸಂಸ್ಥೆಯನ್ನು ಸಂಯುಕ್ತ ಸಹಕಾರಿಯ ಕಾಮನ್ ಸಾಫ್ಟ್‌ವೇರ್ ಪಟ್ಟಿಯಿಂದ ಕೈಬಿಡಲಾಗಿದೆ.



ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕಿನ 74ನೇ ವಾರ್ಷಿಕ ಸಾಮಾನ್ಯ ಸಭೆ – ಬೆಳಗಾವಿ



ಜೀವನಸ್ಫೂರ್ತಿ ಸೌಹಾರ್ದ ಸಹಕಾರಿಯ 3ನೇ ವಾರ್ಷಿಕ ಸಾಮಾನ್ಯ ಸಭೆ – ಹಾವೇರಿ



ಗಣೇಶ ಪತ್ತಿನ ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ – ಉಡುಪಿ



ಸೇಫ್ ಸ್ಟಾರ್ ಸೌಹಾರ್ದ ಸಹಕಾರಿಯ 7ನೇ ವಾರ್ಷಿಕ ಸಾಮಾನ್ಯ ಸಭೆ – ಹೊನ್ನಾವರ



